

# ಸಿಹಿ ಕಹಿ

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

SIHI KAHI

KANNADA DAILY MORNING
BAGALKOT

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor : MARUTI BASAVANTAPPA HOSAMANI

Cell : +91 9741319119

Volume : 07 | Issue : 236 | Thursday 29-05-2025 | E-mail : maruti.b.hosamani76@gmail.com | Page: 4 | Price : Rs. 1/-


## ವಿದ್ಯೆಯಿಂದ ಬದುಕು ಬೆಳಗಲು ಸಾಧ್ಯ: ಸಂತೋಷ ಬಂಡೆ

**ಸಿಹಿ ಕಹಿ ಸುದ್ದಿ,**

**ಹಿರೇರೂಗಿ:** ಮಕ್ಕಳು ಉತ್ತಮ ನಾಗರಿಕರಾಗಿ ರೂಪುಗೊಳ್ಳಲು ತಳಪಾಯದಲ್ಲಿಯೇ ಉತ್ತಮ ಶಿಕ್ಷಣ ಕೊಡಿಸಬೇಕು.

ಮಕ್ಕಳಿಗೆ ಗುಣಮಟ್ಟದ ಶಿಕ್ಷಣದ ಜತೆಗೆ ಉತ್ತಮ ಸಂಸ್ಕಾರ ನೀಡಿದಾಗ ಮಕ್ಕಳ ಭವಿಷ್ಯ ಉಜ್ವಲವಾಗುತ್ತದೆ ಎಂದು ಶಿಕ್ಷಕ ಸಂತೋಷ ಬಂಡೆ ಹೇಳಿದರು.





ಬುಧವಾರ ದಂದು ಇಂಡಿ ತಾಲೂಕಿನ ಹಿರೇರೂಗಿ ಗ್ರಾಮದಲ್ಲಿ ಜಟ್ಟಿಂಗೇಶ್ವರ ಕೋಚಿಂಗ್ ಕ್ಲಾಸಿನ ಸಮಾರೋಪ ಸಮಾರಂಭವನ್ನು ಉದ್ಧೇಶಿಸಿ ಅವರು ಮಾತನಾಡಿದರು.

ವಿದ್ಯೆಯೇ ನಮ್ಮ ಬಾಳಿನ ಬೆಳಕು, ವಿದ್ಯೆಯಿಂದ ಬದುಕು ಬೆಳಗಲು ಸಾಧ್ಯ. ಪ್ರತಿಯೊಬ್ಬರೂ ವಿದ್ಯಾಭ್ಯಾಸವನ್ನು ಚೆನ್ನಾಗಿ ಪಡೆದು, ಮುಂದಿನ ಜೀವನ ಸುಂದರಗೊಳಿಸಿ ಕೊಳ್ಳಬೇಕು ಎಂದು ಹೇಳಿದರು.

ಪ್ರೌಢ ಶಾಲಾ ಶಿಕ್ಷಕ ರವಿ ಗಿಣ್ಣಿ ಮಾತನಾಡಿ, ಅಡುಗೆ ಹಾಳಾದರೆ ಒಂದು ದಿನ ನಷ್ಟ, ಬೆಳೆ ಹಾಳಾದರೆ ಒಂದು ವರ್ಷ ನಷ್ಟ. ಆದರೆ ವಿದ್ಯಾಭ್ಯಾಸ ಹಾಳಾದರೆ ಇಡೀ ಬದುಕೇ ನಷ್ಟವಾಗುತ್ತದೆ. ವಿದ್ಯಾರ್ಥಿ ಜೀವನ ಬಂಗಾರದಂತ ಜೀವನ. ಹಾಗಾಗಿ ವಿದ್ಯಾರ್ಥಿಗಳು ಉತ್ತಮ ಸಂಸ್ಕಾರ, ಪರಿಶ್ರಮದಿಂದ ಚೆನ್ನಾಗಿ ಓದಿ, ಬದುಕನ್ನು ಸುಂದರವಾಗಿ ರೂಪಿಸಿ ಕೊಳ್ಳಬೇಕು ಎಂದು ತಿಳಿಸಿದರು. ಜಟ್ಟೆಪ್ಪ ಸಾಲೋಟಗಿ ಮಾತನಾಡಿ, ಮಕ್ಕಳನ್ನು ಸುಸಂಸ್ಕೃತ ಮತ್ತು ಸಚ್ಚಾರಿತ್ರ್ಯವುಳ್ಳ ಪ್ರಜೆಗಳನ್ನಾಗಿಸುವ ಮೂಲಕ ಮಕ್ಕಳ ಭವಿಷ್ಯವನ್ನು ಉಜ್ವಲಗೊಳಿಸುವ ನಿಟ್ಟಿನಲ್ಲಿ ಎಲ್ಲ ಪೂರಕ ಕಾರ್ಯಗಳನ್ನು ಪಾಲಕ ಪೋಷಕರು ಮಾಡಬೇಕಿದೆ ಎಂದರು.

ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಶೋಭಾ ಗಿಣ್ಣಿ ಪ್ರಥಮ, ಸವಿತಾ ಮರಬಾದ ದ್ವಿತೀಯ, ಕೀರ್ತಿ ಪರಗೊಂಡ ತೃತೀಯ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಲಕ್ಷ್ಮೀ ಜೇವೂರ ಪ್ರಥಮ, ಐಶ್ವರ್ಯ ಪೂಜಾರಿ ದ್ವಿತೀಯ, ಸ್ನೇಹಾ ಶಿರಕನಹಳ್ಳಿ ತೃತೀಯ ಸ್ಥಾನ ಪಡೆದು ಗ್ರಾಮದ ಕೀರ್ತಿ ಹೆಚ್ಚಿಸಿದ ಮಕ್ಕಳನ್ನು ಸನ್ಮಾನಿಸಲಾಯಿತು.

ಮಲ್ಲಪ್ಪ ಪೂಜಾರಿ ಹಾಗೂ ಬೀರಣ್ಣ ಪೂಜಾರಿ ಜ್ಯೋತಿ ಬೆಳಗಿಸಿದರು. ಮಾಳಪ್ಪ ಪೂಜಾರಿ ನೇತೃತ್ವ ವಹಿಸಿದ್ದರು. ಜಟ್ಟೆಪ್ಪ ಮಾವಿನಹಳ್ಳಿ, ಲಕ್ಷ್ಮಣ ಪೂಜಾರಿ, ಜಟ್ಟೆಪ್ಪ ಪೂಜಾರಿ, ನಿಂಗಪ್ಪ ಪೂಜಾರಿ, ಶ್ರೀಶೈಲ ಗುನ್ನಾಪುರ, ಶರಣಪ್ಪ ಪೂಜಾರಿ, ಜಟ್ಟೆಪ್ಪ ಝುಳಕಿ, ಶರಣಪ್ಪ ದಳವಾಯಿ, ಸುದರ್ಶನ ಬೇನೂರ, ಜಟಿಂಗರಾಯ ಮರಡಿ, ಗಜೇಶ್ವರ ಗಿಣ್ಣಿ, ಭೀರಪ್ಪ ಹೊನ್ನಳ್ಳಿ, ಸಿಂಧೂರ ಪೂಜಾರಿ, ಮಾಳಪ್ಪ ನಿಂಬಾಳ ಹಾಗೂ ಶಿಕ್ಷಕರಾದ ಡಿ ಎಸ್ ಹಿರೇಕುರಬರ, ಎ.ಎಂ ಝುಳಕಿ, ವ್ಹಿ.ಡಿ ಗಿಣ್ಣಿ, ಆರ್.ಬಿ ಝುಳಕಿ, ಪ್ರಜ್ವಲ ಕುಲಕರ್ಣಿ ಸೇರಿದಂತೆ ಮಕ್ಕಳು, ಪಾಲಕರು, ತಾಯಂದಿರು ಭಾಗವಹಿಸಿದ್ದರು.

## ಶ್ರೀಶಾರದಾಶ್ರಮದಲ್ಲಿ ನಗೇಂದ್ರನಾಥ ಗುಪ್ತರ–ಸ್ಮೃತಿಗಳ ಪ್ರವಚನ

**ಸಿಹಿ ಕಹಿ ಸುದ್ದಿ,**

**ಚಳ್ಳಕೆರೆ :** ನಗರದ ವಾಸವಿ ಕಾಲೋನಿಯ ಶ್ರೀಶಾರದಾಶ್ರಮದ ದೇವಸ್ಥಾನದಲ್ಲಿ "ವಿಶ್ವಗುರು ಸ್ವಾಮಿ ವಿವೇಕಾನಂದ" ಪ್ರವಚನ ಮಾಲಿಕೆಯ ಭಾಗವಾಗಿ ಶ್ರೀಶಾರದಾಶ್ರಮದ ಅಧ್ಯಕ್ಷರಾದ ಮಾತಾಜೀ ತ್ಯಾಗಮಯೀ ಅವರು ನಗೇಂದ್ರನಾಥ ಗುಪ್ತರ ಸ್ಮೃತಿಗಳ ಬಗ್ಗೆ ವಿಶೇಷ ಪ್ರವಚನ ಕಾರ್ಯಕ್ರಮವನ್ನು ನಡೆಸಿ ಕೊಟ್ಟರು. ಈ ಸತ್ಸಂಗದ ಆರಂಭದಲ್ಲಿ ಶ್ರೀಶಾರದಾಶ್ರಮದ ಸದ್ಭಕ್ತರಿಂದ ಸಾಮೂಹಿಕ ಭಜನಾ ಕಾರ್ಯಕ್ರಮ ನಡೆದರೆ ಕುಮಾರಿ ಹರ್ಷಿತಾ ಅವರಿಂದ ಶ್ರೀಮದ್ ಭಗವದ್ಗೀತೆಯ ಶ್ಲೋಕಗಳ ಪಠಣ ನಡೆಯಿತು. ಈ ಕಾರ್ಯಕ್ರಮದಲ್ಲಿ ಶ್ರೀಶಾರದಾಶ್ರಮದ ಸದ್ಭಕ್ತರಾದ ಶ್ರೀಮತಿ ಜಿ.ಯಶೋಧಾ ಪ್ರಕಾಶ್, ವನಜಾಕ್ಷಿ ಮೋಹನ್, ಯತೀಶ್.ಎಂ ಸಿದ್ದಾಪುರ, ಗೀತಾ ವೆಂಕಟೇಶರೆಡ್ಡಿ, ಚೇತನ್, ಋತಿಕ್, ಸಂಗೀತ, ರಶ್ಮಿ ವಸಂತ, ಸುರೇಶ್, ಶ್ರೀಪಾದ್, ಮಂಜುಳಉಮೇಶ್, ಕಾವೇರಿ ಸುರೇಶಯಾದವ್, ಸುಧಾಮಣಿ ಸೇರಿದಂತೆ ಸದ್ಭಕ್ತರು ಭಾಗವಹಿಸಿದ್ದರು.

**ವರದಿ:ಯತೀಶ್.ಎಂ ಸಿದ್ದಾಪುರ, ಚಳ್ಳಕೆರೆ.**



## ಸುಮಾ ದಿ ಫ್ಲವರ್ ಚಿತ್ರಕ್ಕೆ – ಫಾಲ್ಕೆ ಪ್ರಶಸ್ತಿಯ ಗರಿ

**ಸಿಹಿ ಕಹಿ ಸುದ್ದಿ,**

**ಬೆಂಗಳೂರು :** ರಶ್ಮಿ ಎಸ್ (ಸಾಯಿ ರಶ್ಮಿ) ನಿರ್ದೇಶನದ 'ಸುಮಾ ದಿ ಫ್ಲವರ್' ಚಿತ್ರಕ್ಕೆ ಮುಂಬೈನಲ್ಲಿ ನಡೆದ ಪ್ರತಿಷ್ಠಿತ "ದಾದಾ ಸಾಹೇಬ್ ಫಾಲ್ಕೆ ಫಿಲಂ ಪುರಸ್ಕಾರ್ ಆಫ್ ಇಂಡಿಯಾ" ದಲ್ಲಿ ಪ್ರಶಸ್ತಿ ಲಭಿಸಿದೆ.



ಮಹಿಳಾ ಕಥಾಹಂದರ ಹೊಂದಿದ್ದು ನಮ್ಮ ನಡುವೆ ಇರುವ ಹುಡುಗಿಯೊಬ್ಬಳ ಅಂತರಂಗದ ಕಥೆಯಾಗಿದ್ದು, ಅತೀ ಸೂಕ್ಷ್ಮ ವಿಷಯವನ್ನು ಈ ಚಿತ್ರವು ಒಳಗೊಂಡಿದೆ. ಪ್ರತಿಯೊಬ್ಬ ಭಾರತೀಯ ಮಹಿಳೆಯರು ತಪ್ಪದೇ ನೋಡಲೇ ಬೇಕಾದ ಚಿತ್ರ ಇದಾಗಿದೆ. ಈಗಾಗಲೇಹಲವುಅಂತಾರಾಷ್ಟ್ರೀಯ ಚಲನ ಚಿತ್ರೋತ್ಸವಗಳಲ್ಲಿ ಭಾಗವಹಿಸಿ ಅನೇಕ ಪ್ರಶಸ್ತಿಗಳನ್ನು ತನ್ನದಾಗಿಸಿ ಕೊಂಡಿದೆ.

ಯುವ ಮಹಿಳಾ ನಿರ್ದೇಶಕಿಯಾಗಿ ಕನ್ನಡ ಚಿತ್ರರಂಗದಲ್ಲಿ ಗುರುತಿಸಿ ಕೊಂಡಿರುವ ರಶ್ಮಿ ಎಸ್ (ಸಾಯಿ ರಶ್ಮಿ) ಅವರು ಈ ಹಿಂದೆ ಶ್ರೀ ಕಬ್ಬಾಳಮ್ಮನ ಮಹಿಮೆ, ಮನೆ, ಬ್ಯಾಂಕ್ಲೋನ್, ಸುಳಿ ಎಂಬ ವಿಭಿನ್ನ ಕಥೆಯನ್ನು ಸಿನಿಮಾಗಳ ನಂತರ 'ಸುಮಾ ದಿ ಫ್ಲವರ್' ಚಿತ್ರಕ್ಕೆ ಕಥೆ ಚಿತ್ರಕಥೆ, ಸಂಭಾಷಣೆ ಬರೆದು ನಿರ್ದೇಶನವನ್ನು ಮಾಡಿದ್ದಾರೆ.

ಮುಖ್ಯ ಪಾತ್ರದಲ್ಲಿ ಮಾನ್ಯತಾ ನಾಯ್ಡು, ಪ್ರದೀಪ್ ಗೌಡ, ಅಭಿನಯಿಸಿದ್ದು ಉಳಿದಂತೆ ಜೋ ಸೈಮನ್, ಬಲರಾಜವಾಡಿ, ವಿಜಯಲಕ್ಷ್ಮಿ ಉಪಾಧ್ಯಾಯ, ಕಾವ್ಯ ಪ್ರಕಾಶ್, ಪವಿತ್ರ, ಮುರಳೀಧರ್ ಡಿ ಆರ್, ಅವಿನಾಶ್ ಗಂಜಿಹಾಳ, ಸಿದ್ದು ಮಂಡ್ಯ, ಭೈರವಿ, ಹರಿಹರನ್ ಬಿ ಪಿ, ಶಿವಕುಮಾರ್ ಆರಾಧ್ಯ, ವಿಶೇಷ ಪಾತ್ರದಲ್ಲಿ ಡಾ, ವಿ ನಾಗೇಂದ್ರಪ್ರಸಾದ್ ಅಭಿನಯಿಸಿದ್ದಾರೆ. ದೇವೂ ಮತ್ತು ಗಗನ್ ಆರ್ ಛಾಯಾಗ್ರಾಹಣವಿದೆ. ವೇದಾಂತ್ ಅತಿಶಯ್ ಜೈನ ಸಂಗೀತ ಮತ್ತು ಹಿನ್ನೆಲೆ ಸಂಗೀತ, ಮುತ್ತುರಾಜು.ಟಿ ಸಂಕಲನ, ಕಾರ್ತಿಕ್ ಸುಧನ್, ಡಾ, ಪ್ರಭು ಗಂಜಿಹಾಳ, ಡಾ, ವೀರೇಶ್ ಹಂಡಿಗಿ ಪತ್ರಿಕಾ ಸಂಪರ್ಕ ಚಿತ್ರಕ್ಕಿದ್ದು, ಓಂ ಸಾಯಿ ಸಿನಿಮಾಸ್ ಸಂಸ್ಥೆಯ ಜೊತೆಗೆ ರಂಗಸ್ವಾಮಿ ಟಿ (ರವಿ) ಅವರು ಸಹ ನಿರ್ಮಾಪಕರಾಗಿದ್ದಾರೆ. ಪ್ರಶಸ್ತಿಯ ಖುಷಿಯಲ್ಲಿರುವ ರಶ್ಮಿ ಎಸ್ ಮತ್ತೊಂದು ಚಿತ್ರವನ್ನು ಸಧ್ಯದಲ್ಲೇ ನಿರ್ಮಿಸಲು ಅಣಿಯಾಗಿದ್ದಾರೆ.

**ಡಾ, ಪ್ರಭು ಗಂಜಿಹಾಳ**
**ಮೊ: 9448775346**

## ಪತ್ರಿಕೋದ್ಯಮದ ಯಶಸ್ಸಿಗೆ ಸ್ಪಷ್ಟ ಹಾಗೂ ಪರಿಣಾಮಕಾರಿ ಭಾಷಾ ಶೈಲಿ ಅತ್ಯವಶ್ಯಕ: ಪ್ರೊ. ಸಕ್ಪಾಲ್

**ವಿಜಯಪುರ :** ಪತ್ರಿಕೋದ್ಯಮ ಕ್ಷೇತ್ರದಲ್ಲಿ ಯಶಸ್ಸು ಸಾಧಿಸಲು ಸ್ಪಷ್ಟ ಹಾಗೂ ಪರಿಣಾಮಕಾರಿ ಭಾಷಾ ಶೈಲಿ ಅತ್ಯವಶ್ಯಕವಾಗಿದೆ ಎಂದು ಮಹಿಳಾ ವಿವಿಯ ಸ್ನಾತಕ ಕೋರ್ಸ ವಿಭಾಗಗಳ ವಿಶೇಷ ಅಧಿಕಾರಿ ಪ್ರೊ. ಸಕ್ಪಾಲ್ ಹೂವಣ್ಣ ಹೇಳಿದರು. ನಗರದ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದಲ್ಲಿ ಮಹಿಳಾ ವಿವಿಯ ಯುಜಿ ವಿದ್ಯಾರ್ಥಿನಿಯರಿಗಾಗಿ ಮಂಗಳವಾರ ಆಯೋಜಿಸಿದ್ದ 'ಟೆಲಿವಿಷನ್ ಆ?ಯಂಕರಿಂಗ್' ಕುರಿತ ಒಂದು ದಿನದ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.



ಸ್ವತಂತ್ರವಾಗಿ ನಮ್ಮ ಕೌಶಲ್ಯಗಳನ್ನು ಬಳಸಿಕೊಂಡು ಉದ್ಯೋಗ ಪಡೆಯವ ವಿಪುಲ ಅವಕಾಶಗಳನ್ನು ಮಾಧ್ಯಮ ಕ್ಷೇತ್ರ ನಿಮಗೆ ನೀಡುತ್ತದೆ. ಸುದ್ದಿಯನ್ನು ಸರಳವಾಗಿ, ಸ್ಪಷ್ಟವಾಗಿ ಹಾಗೂ ನೈಜತೆ ಉಳಿಸಿಕೊಂಡು ಪ್ರಸ್ತುತಪಡಿಸುವ ಸಾಮರ್ಥ್ಯ ಇದ್ದರೆ, ಓದುಗರ ವಿಶ್ವಾಸವನ್ನು ಗೆಲ್ಲಬಹುದು. ನಿಮ್ಮ ಕೌಶಲ್ಯಗಳು ನಿಮ್ಮ ಬಹುಮೌಲ್ಯ ಆಸ್ತಿಯಾಗುತ್ತವೆ. ವ್ಯಕ್ತಿತ್ವದ ಬೆಳವಣಿಗೆ, ಆಳವಾದ ವಿಶ್ಲೇಷಣಾತ್ಮಕ ಚಿಂತನೆ ಮತ್ತು ಪ್ರಭಾವಿ ಸಂವಹನ ಶೈಲಿಯಂತಹ ಗುಣಗಳನ್ನು ಈ ಕ್ಷೇತ್ರದಲ್ಲಿ ಬೆಳೆಸಿಕೊಳ್ಳಬಹುದು ಎಂದರು.

ಕಾರ್ಯಾಗಾರದಲ್ಲಿ ಅಧ್ಯಕ್ಷತೆ ವಹಿಸಿದ್ದ ಪತ್ರಿಕೋದ್ಯಮ ಹಾಗೂ ಸಮೂಹ ಸಂವಹನ ವಿಭಾಗದ ಮುಖ್ಯಸ್ಥ ಪ್ರೊ. ಓಂಕಾರ ಕಾಕಡೆ ಮಾತನಾಡಿ, ಪತ್ರಿಕೋದ್ಯಮ ಕ್ಷೇತ್ರವು ಕೇವಲ ವೃತ್ತಿಯ ದಾರಿಯನ್ನಷ್ಟೇ ಅಲ್ಲ, ಜನರ ಬದುಕನ್ನೂ ಸಕಾರಾತ್ಮಕವಾಗಿ ರೂಪಿಸುವ ಶಕ್ತಿಯನ್ನು ಹೊಂದಿದೆ. ಮಾಧ್ಯಮವು ನಿಜಕ್ಕೂ ಸಮಾಜಕ್ಕೆ ದಿಕ್ಕು ತೋರಿಸುವ ಒಂದು ಪರಿಣಾಮಕಾರಿ ಸಾಧನವಾಗಿದೆ. ಇದು ವ್ಯಕ್ತಿಗೆ ತಮ್ಮ ಜೀವನದೊಂದಿಗೆ ಇತರರ ಬದುಕುಗಳಲ್ಲಿಯೂ ಬದಲಾವಣೆಯನ್ನು ತರಲು ಅವಕಾಶ ನೀಡುತ್ತದೆ. ಪತ್ರಿಕೋದ್ಯಮ ಶಿಕ್ಷಣವು ಉದ್ಯೋಗಪರ ದಕ್ಷತೆಗಳು ಮತ್ತು ಸಂವಹನ ಕೌಶಲ್ಯಗಳನ್ನು ಬೆಳೆಸುವುದರಲ್ಲಿ ಮಹತ್ವಪೂರ್ಣ ಪಾತ್ರವಹಿಸುತ್ತದೆ. ಡಿಜಿಟಲ್ ಯುಗದಲ್ಲಿ ಈ ಕೌಶಲ್ಯಗಳನ್ನು ಸದುಪಯೋಗಪಡಿಸಿಕೊಂಡು ಯಶಸ್ಸು ಸಾಧಿಸಲು ಇಂತಹ ಕಾರ್ಯಾಗಾರಗಳು ಮತ್ತು ತರಬೇತಿಗಳು ಬಹುಮುಖ್ಯವಾಗಿವೆ ಎಂದರು.

ಕಾರ್ಯಾಗಾರದಲ್ಲಿ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ. ತಹಮೀನಾ ಕೋಲಾರ ಮತ್ತು ಸಂದೀಪ ನಾಯಕ, ಬೋಧಕ ಬೋದಕೇತರ ಸಿಬ್ಬಂದಿ ವರ್ಗದವರು, ಸಂಶೋಧನಾ ವಿದ್ಯಾರ್ಥಿನಿಯರು, ಸ್ನಾತಕ ಹಾಗೂ ಸ್ನಾತಕೋತರ ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಸಂಶೋಧನಾ ವಿದ್ಯಾರ್ಥಿನಿಯರಾದ ಜಯಶ್ರೀ ತಳವಾರ ಸ್ವಾಗತಿಸಿದರು. ಫಿಲೋಮಿನಾ ಅತಿಥಿ ಪರಿಚಯಿಸಿದರು. ಸುಷ್ಮಾ ಪವಾರ ನಿರೂಪಿಸಿದರು. ಪವಿತ್ರಾ ಕಂಬಾರ ವಂದಿಸಿದರು.

## ವಿದ್ಯಾಪೋಷಕ ದಿಂದ ವೃತ್ತಿಪರ ವಿದ್ಯಾರ್ಥಿ / ವಿದ್ಯಾರ್ಥಿನಿಯರಿಗೆ – ಆರ್ಥಿಕ ನೆರವು




**ಗದಗ :** ಆರ್ಥಿಕ ಸಂಕಷ್ಟದಲ್ಲಿರುವ ಅರ್ಹ ಪ್ರತಿಭಾನ್ವಿತ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಧಾರವಾಡದ ವಿದ್ಯಾಪೋಷಕ ಸಂಸ್ಥೆಯು ನರ್ಚರ್ ಮೆರಿಟ್ ಯೋಜನೆಯ ಅಡಿಯಲ್ಲಿ 2025–26 ನೇ. ಶೈಕ್ಷಣಿಕ ಸಾಲಿಗಾಗಿ ವೃತ್ತಿಪರ (ಇಂಜನೀಯರಿಂಗ್/ಮೆಡಿಕಲ್) ಪದವಿ ಸೇರ ಬಯಸುವ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಆರ್ಥಿಕ ನೆರವನ್ನು ನೀಡಲು ಮುಂದಾಗಿದೆ.

ವಿದ್ಯಾರ್ಥಿ/ವಿದ್ಯಾರ್ಥಿನಿಯರು 2025 ನೇ. ಶೈಕ್ಷಣಿಕ ಸಾಲಿನಲ್ಲಿ ದ್ವಿತೀಯ ಪಿ.ಯು.ಸಿ. ಪರೀಕ್ಷೆಯನ್ನು ಮೊದಲನೆ ಸಲ ಬರೆದಿರಬೇಕು. ಹಾಗೂ 80% ಕ್ಕಿಂತ ಹೆಚ್ಚು ಅಂಕಗಳೊಂದಿಗೆ ಉತ್ತೀರ್ಣರಾಗಿರ ಬೇಕು.

ದ್ವಿತೀಯ ಪಿ.ಯು.ಸಿ ನಂತರ ಇಂಜನೀಯರಿಂಗ್, ಮೆಡಿಕಲ್, ವಿಭಾಗಗಳಿಗೆ ಪ್ರವೇಶ ಬಯಸುವವರು ಅರ್ಜಿ ಹಾಕಲು ಅರ್ಹರಾಗಿದ್ದಾರೆ. ಕರ್ನಾಟಕಕ್ಕೆ ಸಂಬಂಧಪಟ್ಟ ಇಂಜನೀಯರಿಂಗ್ ಸೇರ ಬಯಸುವ ವಿದ್ಯಾರ್ಥಿ/ವಿದ್ಯಾರ್ಥಿನಿಯರು ಸಿ.ಇ.ಟಿ ಪರೀಕ್ಷೆಯಲ್ಲಿ 25000 ಕ್ಕಿಂತ ಕಡಿಮೆ ರ್ಯಾಂಕ್ ನೊಂದಿಗೆ ಹಾಗೂ ಮೆಡಿಕಲ್ ಸೇರ ಬಯಸುವ ವಿದ್ಯಾರ್ಥಿ/ವಿದ್ಯಾರ್ಥಿನಿಯರು 3000 ಕ್ಕಿಂತ ಕಡಿಮೆ ರ್ಯಾಂಕ್ ನೊಂದಿಗೆ ಹಾಗೂ ಅಖಿಲ ಭಾರತ ರ್ಯಾಂ ಕಿಂಗ್ ನಲ್ಲಿ 60000 ಕ್ಕಿಂತ ಕಡಿಮೆ ರ್ಯಾಂಕ್ ನೊಂದಿಗೆ ಉತ್ತೀರ್ಣರಾಗಿರಬೇಕು. ಕುಟುಂಬದ ಮಾಸಿಕ ವರಮಾನ 15,000/– ರೂಗಿಂತ ಕಡಿಮೆ ಇರಬೇಕು.

ವಿದ್ಯಾರ್ಥಿ/ವಿದ್ಯಾರ್ಥಿನಿಯರ ಪಾಲಕರು/ಪೋಷಕರು ಕರ್ನಾಟಕದ ನಿವಾಸಿ ಯಾಗಿರಬೇಕು.

ಧನ ಸಹಾಯದ ಅರ್ಜಿಯು ವಿದ್ಯಾಪೋಷಕ ಸಂಸ್ಥೆಯ ಅಂತರ್ಜಾಲ www. vidyaposhak.ngo ದಲ್ಲಿ ಲಭ್ಯವಿದೆ. ವಿದ್ಯಾರ್ಥಿಗಳು ಅರ್ಜಿಯನ್ನು ಆನ್ಲೈನ್ ಮೂಲಕ ಅದರಲ್ಲಿ ನಮೂದಿಸಿರುವ ಮಾಹಿತಿಯನ್ನು ತುಂಬಿ ಅಗತ್ಯ ದಾಖಲಾತಿಗಳನ್ನು ಅಪ್ಲೋಡ್ ಮಾಡಬೇಕು. ಆನ್ಲೈನ್ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ಜೂನ್ 30, 2025.

ಹೆಚ್ಚಿನ ಮಾಹಿತಿಗಾಗಿ ವಿದ್ಯಾಪೋಷಕ, ನಂ. 307/4ಎ1, ನಗರಕರ ಕಾಲೋನಿ, ಮಹಿಷಿ ರಸ್ತೆ, ಮಾಳಮಡ್ಡಿ ಧಾರವಾಡ, ದೂರವಾಣಿ ಸಂಖ್ಯೆ : 0836–2747357, 8861201828 ನ್ನು ಸಂಪರ್ಕಿಸಬಹುದು.

ಗದಗ ಜಿಲ್ಲೆಯ ವಿದ್ಯಾರ್ಥಿಗಳು ಹೆಚ್ಚಿನ ಮಾಹಿತಿಗಾಗಿ ಡಾ, ಸಂಗಮೇಶ ಸಜ್ಜನರ ಮೊ– 9945555084, ಡಾ, ಪ್ರಭು ಗಂಜಿಹಾಳ ಮೊ: 9448775346, ಡಾ, ಪಿ.ಎಸ್ ಕಣವಿ ಮೊ:9449121688, ಪ್ರೊ, ಎಚ್.ಎನ್ ಕಾಳೆ ಮೊ: 9108992921 ಇವರನ್ನು ಸಂಪರ್ಕಿಸ ಬಹುದಾಗಿದೆ.

*****

**ಡಾ, ಪ್ರಭು ಗಂಜಿಹಾಳ**
**ಮೊ:9448775346**

## ಸ್ಪರ್ಧೆ ಎನ್ನುವುದುವಿದ್ಯಾರ್ಥಿಗಳಿಗೆ ಕಾರ್ಯ ಪ್ರವೃತ್ತಿಗೊಳಿಸುವ ತಂತ್ರ: ಮೋಹನ ದೇಶಪಾಂಡೆ

**ಬಾಗಲಕೋಟೆ:** ಈತಂತ್ರಜ್ಞಾನದಯುಗದಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಎಲ್ಲರೀತಿಯ ಸಂಪನ್ಮೂಲಗಳುದೊರಕುವಲ್ಲಿ ಯಾವುದೇ ಅನುಮಾನವಿಲ್ಲ, ಅವುಗಳನ್ನು ಸದುಪಯೋಗ ಪಡಿಸಿಕೊಳ್ಳುವ ಮನೋಭಾವನೆಯನ್ನು ಬೆಳೆಸಿಕೊಳ್ಳಬೇಕುಮತ್ತು ಸ್ಪರ್ಧೆ ಎನ್ನುವುದು ವಿದ್ಯಾರ್ಥಿಗಳಿಗೆ ಕಾರ್ಯ ಪ್ರವೃತ್ತಿಗೊಳಿಸುವ ತಂತ್ರ ಎಂದು ಸ್ವಾಮಿವಿವೇಕಾನಂದಪ್ರೌಢಶಾಲೆಯ ಸಹ ಶಿಕ್ಷಕ ಶ್ರೀ ಮೋಹನ ದೇಶಪಾಂಡೆ ಅವರು ಎನ್ಎಸ್ಎಸ್ವಿಶೇಷ ಶಿಬಿರದ ದೈನಂದಿನ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದರು.



ಅಧ್ಯಕ್ಷತೆವಹಿಸಿದ್ದ ಶ್ರೀ ಹುಸೇನಪ್ಪ ವಿ. ಮಾತನಾಡಿ ಜೀವನ ಮೌಲ್ಯಗಳು ಮಾತ್ರ ಸುಂದರ ಜೀವನ ಆಧಾರಗಳಾಗಿವೆ ಎಂದು ವಿದ್ಯಾರ್ಥಿಗಳಿಗೆ ತಿಳಿಹೇಳಿದರು.

ನಗರದ ಬಿವಿಬಿ ಸಂಘದ ಬಸವೇಶ್ವರ ವಿಜ್ಞಾನ ಮಹಾವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆ ಘಟಕ 1 ಮತ್ತು 2ಮತ್ತು ಐಕ್ಯೂಎಸಿ ವತಿಯಿಂದ ಕಿರಸೂರು ಗ್ರಾಮದಲ್ಲಿ ಹಮ್ಮಿಕೊಂಡಿದ್ದ ರಾಷ್ಟ್ರೀಯ ಸೇವಾ ಯೋಜನೆ ಘಟಕಗಳ ವಾರ್ಷಿಕ ವಿಶೇಷ ಶಿಬಿರದ ದೈನಂದಿನ ಸಮಾರಂಭದಲ್ಲಿ ಡಾ. ಡಿ. ಎಸ್. ಲಮಾಣಿ, ಐಕ್ಯೂಎಸಿ ಸಂಯೋಜಕರು ಶ್ರೀ. ಶಿವಾನಂದ ಶಿವನಗುತ್ತಿ, ಘಟಕ–2ರ ಕಾರ್ಯಕ್ರಮಾಧಿಕಾರಿ ಶ್ರೀ ಎಸ್. ಕೆ. ಜಹಗೀದಾರ, ಶಿಬಿರಾಧಿಕಾರಿ ಸಿದ್ರಾಮ ಮಂಕಣಿ ಯು, ಎನ್ ಎನ್ ಎಸ್ ಘಟಕದ ಸದಸ್ಯರು, ಸ್ವಯಂ ಸೇವಕರು, ಕಾಲೇಜಿನ ವಿವಿಧ ವಿಭಾಗದ ಮುಖ್ಯಸ್ಥರು, ವಿದ್ಯಾರ್ಥಿಗಳು,ಮಹಾವಿದ್ಯಾಲಯದ ಬೋಧಕ ಬೋಧಕೇತರ ಸಿಬ್ಬಂದಿಗಳು ಹಾಜರಿದ್ದರು. ಸ್ವಯಂಸೇವಕರಾದ ಕು. ಅಂಬಿಕಾ ನಿರೂಪಿಸಿ, ಕು. ನಿಸರ್ಗ ಪ್ರಾರ್ಥಿಸಿದರು ಮತ್ತುಕು. ಬಸವರಾಜ ಸ್ವಾಗತಿಸಿ, ಪರಿಚಯಿಸಿದರು. ಕು. ವಿಜಯಲಕ್ಷ್ಮಿ ವಂದಿಸಿದರು.

## ಬಾಗಲಕೋಟೆ: ವಿದ್ಯಾರ್ಥಿ ನಿಲಯಗಳ ಪ್ರವೇಶಕ್ಕೆ ಅರ್ಜಿ

**ಬಾಗಲಕೋಟೆ :** ಪ್ರಸಕ್ತ ಸಾಲಿನ ಬೀಳಗಿ ತಾಲೂಕಿನ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಮೆಟ್ರಿಕ್ ನಂತರ (ಪಿ.ಯು.ಸಿ ಸಮನಾಂತರ ಕೋರ್ಸಿನ ಡಿಪ್ಲೋಮಾ. ಐಟಿಐ ವಿದ್ಯಾರ್ಥಿಗಳಿಗಾಗಿ) ಬಾಲಕರ/ಬಾಲಕೀಯರ ವಸತಿ ನಿಲಯಗಳಿಗೆ ಆನ್ ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ಜೂನ್.20 ಕೊನೆಯ ದಿನವಾಗಿದ್ದು , ಅಷ್ಟರೊಳಗೆ, ವಿದ್ಯಾರ್ಥಿಗಳು ಅಗತ್ಯ ದಾಖಲೆಗಳೊಂದಿಗೆ https://shp.karnataka.gov.in/bcwd ಸಂಪರ್ಕಿಸಿ ಅರ್ಜಿ ಸಲ್ಲಿಸಿ ನಂತರ, ಆನ್‌ಲೈನ್ ಸ್ವೀಕೃತಿ ಪ್ರತಿ ಹಾಗೂ ಅಗತ್ಯ ದಾಖಲೆಗಳನ್ನು ದೃಢಿಕರಿಸಿ ತಾಲೂಕು ಕಛೇರಿಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಇಲಾಖೆಯಅಧಿಕೃತಜಾಲತಾಣ https://bcwd.karnataka.gov.in/, ಅಥವಾ ತಾಲ್ಲೂಕು ಕಲ್ಯಾಣಾಧಿಕಾರಿಗಳ ಕಾರ್ಯಾಲಯ, ಬೀಳಗಿ ಇಲ್ಲಿಗೆ ಭೇಟಿನೀಡುವುದುಮತ್ತುತಾಂತ್ರಿಕತೊಂದರೆಗಳಾದ್ದಲ್ಲಿ bcwdhelpline@gmail.com ಇ–ಮೇಲ್ ಮೂಲಕ ಸಂಪರ್ಕಿಸಲು ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## 30 ವರ್ಷ ಮೇಲ್ಪಟ್ಟ ಪ್ರತಿಯೊಬ್ಬರು ನಿರಂತರ ರಕ್ತದೊತ್ತಡ ಪರೀಕ್ಷೆ ಮಾಡಿಸಿಕೊಳ್ಳಿ: ಡಾ. ನಂದಕುಮಾರ



**ಕೊಪ್ಪಳ :** 30 ವರ್ಷ ಮೇಲ್ಪಟ್ಟ ಪ್ರತಿಯೊಬ್ಬರು ನಿರಂತರ ರಕ್ತದೊತ್ತಡ ಪರೀಕ್ಷೆ ಮಾಡಿಸಿಕೊಳ್ಳಬೇಕು. ಅಧೀಕ ರಕ್ತದೊತ್ತಡ ಕಂಡುಬಂದರೆ ನಿಯಂತ್ರಣಕ್ಕಾಗಿ ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿ ಚಿಕಿತ್ಸೆ ನೀಡಲಾಗುತ್ತದೆ ಎಂದು ಕೊಪ್ಪಳ ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ನಂದಕುಮಾರ ಹೇಳಿದರು
ಅವರು ಶನಿವಾರ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಕೊಪ್ಪಳ ವಿಭಾಗಿಯ ಕಛೇರಿಯಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಸರ್ವೇಕ್ಷಣಾ ಅಧಿಕಾರಿಗಳ ಘಟಕ, ಜಿಲ್ಲಾ ಎನ್.ಸಿ.ಡಿ ವಿಭಾಗ ಹಾಗೂ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ, ಕೊಪ್ಪಳ ಇವರ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ವಿಶ್ವ ರಕ್ತದೊತ್ತಡ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಜೀವನ ಶೈಲಿಯಿಂದ ಬರುವ ರೋಗಗಳಾದ, ಮಧುಮೇಹ, ಕ್ಯಾನ್ಸರ್, ಅಧೀಕ ರಕ್ತದೊತ್ತಡ, ಹೃದಯಘಾತ ಹಾಗೂ ಪಾರ್ಶ್ವವಾಯುಗಳಲ್ಲಿ ಅಧೀಕ ರಕ್ತದೊತ್ತಡ ಒಂದಾಗಿದೆ. ವಿಶ್ವ ಆರೋಗ್ಯ ಸಂಸ್ಥೆಯುರಕ್ತದೊತ್ತ್ತಡದಬಗ್ಗೆಜಾಗೃತಿಮೂಡಿಸಲು ಪ್ರತಿ ವರ್ಷ ಮೇ 17 ರಂದು ವಿಶ್ವ ರಕ್ತದೊತ್ತಡ ದಿನಾಚರಣೆ ಕಾರ್ಯಕ್ರಮವನ್ನು ಆಚರಿಸಲು ನಿರ್ದೇಶನ ನೀಡಿರುತ್ತದೆ. ಸಾರ್ವಜನಿಕರಿಗೆ ಅಧೀಕ ರಕ್ತದೊತ್ತಡ ನಿಯಂತ್ರಣ ಹಾಗೂ ಉತ್ತಮ ಜೀವನ ಶೈಲಿಯ ಕುರಿತು ಅರಿವು ಮೂಡಿಸುವುದು ಈ ಕಾರ್ಯಕ್ರಮದ ಇದರ ಉದ್ದೇಶವಾಗಿದೆ. "ನಿಮ್ಮ ರಕ್ತದೊತ್ತಡವನ್ನು ನಿಖರವಾಗಿ ಅಳೆಯಿರಿ ಅದನ್ನು ನಿಯಂತ್ರಿಸಿ, ಹೆಚ್ಚು ಕಾಲ ಬದುಕಿ" ಎಂಬ ಈ ವರ್ಷದ ಘೋಷವಾಕ್ಯದೊಂದಿಗೆ ಕಾರ್ಯಕ್ರಮವನ್ನು ಆಚರಿಸಲಾಗುತ್ತದೆ ಎಂದರು.

ಅಧೀಕ ರಕ್ತದೊತ್ತ್ತಡ ಭಾರತದಲ್ಲಿ ಒಂದು ದೊಡ್ಡ ಸಾರ್ವಜನಿಕ ಆರೋಗ್ಯ ಸವಾಲಾಗಿದೆ. ನಗರ ಮತ್ತು ಗ್ರಾಮೀಣ ಪ್ರದೇಶಗಳ ಜನಸಂಖ್ಯೆಯಲ್ಲಿ ಇದರ ವ್ಯಾಪಕತೆ ಹೆಚ್ಚಾಗುತ್ತಿದೆ. ಭಾರತದಲ್ಲಿ ಇದರಿಂದ ಹೃದಯಘಾತ ಮತ್ತು ಪಾರ್ಶ್ವವಾಯುನಂತಹ ಆರೋಗ್ಯ ಸಮಸ್ಯಗಳು ಉಂಟಾಗುತ್ತವೆ. 30 ವರ್ಷ ಮೇಲ್ಪಟ್ಟವರು ರಕ್ತದೊತ್ತಡ ಪರೀಕ್ಷೆ ಮಾಡಿಸಿಕೊಳ್ಳಬೇಕು. ಅಧೀಕ ರಕ್ತದೊತ್ತಡ ಕಂಡುಬಂದಲ್ಲಿ ಸಮೀಪದ ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿ ಚಿಕಿತ್ಸೆ ಪಡೆಯಬಹುದು. ವಿವಿಧ ಹಂತಗಳಲ್ಲಿ ಕೆಲಸ ಮಾಡುವ ಉದ್ಯೋಗಿಗಳು ಆರೋಗ್ಯದ ಕಡೆ ನಿರ್ಲಕ್ಷ್ಯ ಮಾಡದೇ ನಿರಂತರ ಪರೀಕ್ಷೆ ಮಾಡಿಸಿಕೊಳ್ಳಬೇಕು. ದಿನನಿತ್ಯ ಸೇವಿಸುವ ಆಹಾರದಲ್ಲಿ ಉಪ್ಪು ಮತ್ತು ಕೊಬ್ಬಿನಾಂಶಗಳು ಸೀಮಿತವಾಗಿರಬೇಕು. ಪೌಷ್ಠಿಕ ಆಹಾರ ಸೇವಿಸಬೇಕು. ಪ್ರತಿದಿನ ಕನಿಷ್ಠ ಪಕ್ಷ ಒಂದುಗಂಟೆ ಕಾಲ ದೈಹೀಕ ಚಟುವಟಿಕೆ ನಡೆಸುವುದು, ಯೋಗ, ದ್ಯಾನ ಮಾಡುವುದು ಮತ್ತು ಹೊರಗಿನ ಆಹಾರ ಪದಾರ್ಥಗಳ ಸೇವನೆ ಮಾಡಬಾರದು. ಧೂಮಪಾನ-ಮಧ್ಯಪಾನ ತೆಜಿಸಿ, ಉತ್ತ್ತಮ ಆಹಾರ ಪದ್ದತಿಯನ್ನು ಅನುಸರಿಸಬೇಕೆಂದು ಹೇಳಿದರು.

ಕೊಪ್ಪಳ ಜಿಲ್ಲಾ ಕುಷ್ಠರೋಗ ನಿರ್ಮೂಲನಾಧಿಕಾರಿ ಡಾ. ಹೆಚ್.ಪ್ರಕಾಶ ಅವರು, ಮನುಷ್ಯನ ಜೀವಿತ ಅವಧಿಯ ಬಗ್ಗೆ ಟೆಲಿ ಮನಸ್, ಇ-ಸಂಜೀವಿನ ಕುರಿತು ವಿವರವಾಗಿ ಮಾತನಾಡಿದರು.

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಕೊಪ್ಪಳ ವಿಭಾಗಿಯ ತಾಂತ್ರಿಕ ಶಿಲ್ಪಿ ಡಾ. ಬಿ.ವಿ ಭಟ್ಟರ್ ಅವರು ಮಾತನಾಡಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಹಮ್ಮಿಕೊಳ್ಳಲಾದ ಈ ಕಾರ್ಯಕ್ರಮ ಇಂದಿನ ಅಧಿಕಾರಿ, ಸಿಬ್ಬಂದಿಗಳಿಗೆ ಬಹಳ ಪ್ರಯೋಜನವಾಗಿವೆ?. ನೌಕರರು ವಿವಿಧ ಅಸಾಂಕ್ರಾಮಿಕ ರೋಗಗಳ ಬಗ್ಗೆ ಮಾಹಿತಿಯ ಪಡೆದುಕೊಂಡು ತಮ್ಮ ತಮ್ಮ ಗ್ರಾಮಗಳಲ್ಲಿ, ವಾರ್ಡ್ ಗಳಲ್ಲಿ ಹಾಗೂ ಸುತ್ತ-ಮುತ್ತಲಿನ ಸಾರ್ವಜನಿಕರಿಗೆ ಅರಿವು ಮೂಡಿಸುವಂತೆ ಕರೆ ನೀಡಿದರು.

ಈ ಕಾರ್ಯಕ್ರಮದಲ್ಲಿ ಕೊಪ್ಪಳ ವೈದ್ಯಕೀಯ ಮಹಾವಿದ್ಯಾಲಯದ ಕಮಿನ್ಯೂಟಿ ಮೆಡಿಸಿನ್ ವಿಭಾಗದ ವೈದ್ಯಾಧಿಕಾರಿಗಳಾದ ಡಾ.ಮನು, ಡಾ.ಅಂಜನಾ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಶಿವಾನಂದ ವ್ಹಿ.ಪಿ., ಕ.ಕ.ರ.ಸಾ.ನಿ ಕೊಪ್ಪಳ ವಿಭಾಗದ ಸಹಾಯಕ ಆಡಳಿತಾಧಿಕಾರಿ ಸಂಜೀವ್ ಕುಮಾರ, ಅಂಕಿಸಂಖ್ಯೆಗಳ ಅಧಿಕಾರಿ ಕೆ.ದೇವರಾಜ, ಭದ್ರತಾ ಅಧಿಕಾರಿ ಶ್ರೀದೇವಿ, ಎನ್.ಸಿ.ಡಿ ಕಾರ್ಯಕ್ರಮದ ಸಲಹೆಗಾರ ಡಾ. ಜಯಶ್ರೀ, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿಎಲ್.ವಿಸಜ್ಜನರ್,ಪ್ರಯೋಗಶಾಲಾ ತಾಂತ್ರಿಕ ಅಧಿಕಾರಿಗಳಾದ ರಾಜಕುಮಾರ ಹಾಗೂ ಸುಧೀರ್, ಆಪ್ತಸಮಾಲೋಚಕಿ ಕೆ.ಶಾಂತಮ್ಮ ಸೇರಿದಂತೆ ಇತರೆ ಸಿಬ್ಬಂದಿಗಳು ಉಪಸ್ಥಿತರಿದ್ದರು.

ಕಾರ್ಯಕ್ರಮದ ನಂತರ ಕ.ಕ.ರ.ಸಾ.ನಿ ಕೊಪ್ಪಳ ವಿಭಾಗದ ಕಛೇರಿಯ ಎಲ್ಲಾ ಅಧಿಕಾರಿ, ಸಿಬ್ಬಂದಿಗಳಿಗೆ ಆರೋಗ್ಯ ತಪಾಸಣಾ ಶಿಬಿರ ಹಮ್ಮಿಕೊಂಡು, ಚಿಕಿತ್ಸೆ ನೀಡಲಾಯಿತು.

## ಮುಂಗಾರು ಹಂಗಾಮಿನ ಪೂರ್ವಸಿದ್ಧತೆ, ದ್ವೈಮಾಸಿಕ ಕಾರ್ಯಾಗಾರ ಹಾಗೂ ವಿಕಸಿತ ಕೃಷಿ ಸಂಕಲ್ಪ ಅಭಿಯಾನ ರೈತರಿಗೆ ಕೃಷಿ ಇಲಾಖೆಯ ಕಾರ್ಯಕ್ರಮಗಳು ಸಮರ್ಪಕವಾಗಿ ತಲುಪಲಿ: ಕೊಪ್ಪಳ ಶಾಸಕ ಕೆ.ರಾಘವೇಂದ್ರ ಹಿಟ್ನಾಳ

**ಕೊಪ್ಪಳ :** ಪ್ರಸಕ್ತ ಸಾಲಿನ ಮುಂಗಾರು ಹಂಗಾಮಿಗೆ ಅವಶ್ಯವಿರುವ ಬಿತ್ತನೆ ಬೀಜ, ರಸಗೊಬ್ಬರದ ಜೊತೆಗೆ ರೈತರಿಗೆ ಕೃಷಿ ಇಲಾಖೆಯ ಕಾರ್ಯಕ್ರಮಗಳನ್ನು ಸಮರ್ಪಕವಾಗಿ ತಲುಪಿಸಬೇಕೆಂದು ಕೊಪ್ಪಳ ಶಾಸಕ ಕೆ.ರಾಘವೇಂದ್ರ ಹಿಟ್ನಾಳ ಹೇಳಿದರು.

ಅವರು ಜಿಲ್ಲಾ ಪಂಚಾಯತ್ ಜೆ.ಹೆಚ್.ಪಟೇಲ್ ಸಭಾಂಗಣದಲ್ಲಿ ಕೊಪ್ಪಳ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕೃಷಿ ಇಲಾಖೆ, ಗಂಗಾವತಿಯ ಕೃಷಿ ವಿಜ್ಞಾನ ಕೇಂದ್ರ ಮತ್ತು ಕೊಪ್ಪಳದ ಕೃಷಿ ತಂತ್ರಜ್ಞರ ಸಂಸ್ಥೆ ವತಿಯಿಂದ ಹಮ್ಮಿಕೊಳ್ಳಲಾಗಿದ್ದ 2025-26ನೇ ಸಾಲಿನ ಮುಂಗಾರು ಹಂಗಾಮಿನ ಪೂರ್ವಸಿದ್ಧತೆ, ದ್ವೈಮಾಸಿಕ ಕಾರ್ಯಾಗಾರ ಹಾಗೂ ವಿಕಸಿತ ಕೃಷಿ ಸಂಕಲ್ಪ ಅಭಿಯಾನ ಉದ್ಘಾಟಿಸಿ ಅವರು ಮಾತನಾಡಿದರು.

ಈ ವರ್ಷ ಮುಂಗಾರು ಹಂಗಾಮಿನ ಸಿದ್ಧತೆ ಪೂರ್ವದಲ್ಲಿ ರಾಜ್ಯ ಸರ್ಕಾರವು ರೈತರಿಗೆ ಬೇಕಾಗಿರುವ ಬಿತ್ತನೆ ಬೀಜಗಳು, ರಸಗೊಬ್ಬರಗಳ ವ್ಯವಸ್ಥೆಯ ಜೊತೆಗೆ ಸರ್ಕಾರದ ಅನೇಕ ಯೋಜನೆಗಳು ಮತ್ತು ಕಾರ್ಯಕ್ರಮ ಬಗ್ಗೆಯೂ ಸಹ ರೈತರಿಗೆ ತಿಳಿಸುವಂತಹ ಪ್ರಯತ್ನವನ್ನು ಕೃಷಿ ಇಲಾಖೆಯ ಮೂಲಕ ಮಾಡುತ್ತಿದೆ. ನಮ್ಮ ಸರ್ಕಾರವು ಹೆಚ್ಚು ರೈತರಿಗೆ ಅನುಕೂಲವಾಗುವಂತಹ ಕಾರ್ಯಕ್ರಮಗಳನ್ನು ನೀಡಿದೆ. ಈ ಬಾರಿ ಜಿಲ್ಲೆಯಲ್ಲಿ ಉತ್ತಮ ಮಳೆಯಾಗುತ್ತಿದ್ದು, ಮುಂಗಾರು ಬಿತ್ತನೆ ಪ್ರಾರಂಭವಾಗಲಿದೆ. ಬಿತ್ತನೆ ಬೀಜ ಮತ್ತು ಗೊಬ್ಬರಕ್ಕೆ ಯಾವುದೇ ರೀತಿಯಸಮಸ್ಯೆಯಾಗದಂತೆನೋಡಿಕೊಳ್ಳಿ ಎಂದರು.

ಇತ್ತೀಚೆಗೆ ಆನೆಕಲ್ಲು ಮಳೆಯಿಂದಾಗಿ ಅನೇಕ ಭಾಗಗಳಲ್ಲಿಭತ್ತದ ಬೆಳೆನಷ್ಟವಾಗಿದ್ದು, ಇದಕ್ಕೆ ಪರಿಹಾರ ನೀಡುವಂತೆ ಜಿಲ್ಲಾ ಉಸ್ತುವಾರಿ ಸಚಿವರೊಂದಿಗೆ ಮುಖ್ಯಮಂತ್ರಿಗಳಿಗೆ ತಿಳಿಸಿದ್ದೇವೆ. ರೈತರು ಉತ್ತಮ ಬೆಳೆ ಬೆಳೆದಾಗ ಸರಿಯಾದ ಬೆಲೆ ಸಿಗುವುದಿಲ್ಲ ಹಾಗೂ ಉತ್ತಮ ಬೆಳೆಯಿದ್ದಾಗ ಆ ಬೆಳೆಗೆ ಸರಿಯಾದ ಬೆಲೆ ಇರುವುದಿಲ್ಲ. ಈ ಕಾರಣದಿಂದ ಸಾಲದಿಂದ ಮುಕ್ತಿಹೊಂದಲು ರೈತರಿಗೆ ಕಷ್ಟವಾಗುತ್ತದೆ. ರೈತರಿಗಾಗಿ ಸರ್ಕಾರವು ಅನೇಕ ಕಾರ್ಯಕ್ರಮಗಳನ್ನು ಕೃಷಿ ಇಲಾಖೆಯಿಂದ ಜಾರಿಗೊಳಿಸಲಾಗುತ್ತಿದೆ. ಈ ಹಿಂದೆ ನಮ್ಮ ಸರ್ಕಾರವು ಜಾರಿಗೆ ತಂದ ಕೃಷಿ ಹೊಂಡ ನಿರ್ಮಾಣ ಯೋಜನೆಯಿಂದಾಗಿ ಬಹಳಷ್ಟು ರೈತರಿಗೆ ಅನುಕೂಲವಾಗಿದೆ. ವಿಕಸಿತ ಕೃಷಿ ಸಂಕಲ್ಪ ಅಭಿಯಾನದಡಿ ಇಂದು ಮಣ್ಣು ಪರೀಕ್ಷಾ ವಾಹನಗಳನ್ನು ಉದ್ಘಾಟಿಸಲಾಗಿದ್ದು, ರೈತರು ಹೆಲ್ಪ್ ಲೈನ್‌ಗೆ ಕರೆ ಮಾಡಿದಾಗ ತ್ವರಿತಗತಿಯಲ್ಲಿ ಸ್ಪಂದನೆ ನೀಡಬೇಕು. ಇದರ ಜೊತೆಗೆ ಸ್ಥಳಕ್ಕೆ ಭೇಟಿ ನೀಡಿ, ಮಣ್ಣು ಪರೀಕ್ಷಿಸಿ, ಅಲ್ಲಿ ಯಾವ ಬೆಳೆ ಬೆಳೆಯಲು ಸೂಕ್ತವೆಂದು ರೈತರಿಗೆ ಮಾಹಿತಿ ನೀಡಬೇಕು. ಈ ಬಗ್ಗೆ ಅಧಿಕಾರಿಗಳು ಚುರುಕಾಗಿ ಕೆಲಸ ಮಾಡಬೇಕೆಂದು ಹೇಳಿದರು.



ಜಿಲ್ಲೆಯಲ್ಲಿ ನೀರಾವರಿ ಪ್ರದೇಶದಲ್ಲಿ ಹಾಗೂ ವಿಶೇಷವಾಗಿ ಭತ್ತ ಬೆಳೆಯುವ ಭಾಗಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ರಸಾಯನಿಕಗೊಬ್ಬರಗಳ ಬಳಕೆಯಾಗುತ್ತಿದ್ದು, ಇದು ಜನರ ಆರೋಗ್ಯಕ್ಕೆ ಹಾನಿಕಾರವಾಗುವ ಜೊತೆಗೆ ಭೂಮಿಯ ಫಲವತ್ತತೆಯನ್ನು ಸಹ ಹಾಳು ಮಾಡುತ್ತದೆ. ಇದಕ್ಕಾಗಿ ಸಾವಯವ ಕೃಷಿಗೆ ಹೆಚ್ಚಿನ ಅದ್ಯತೆ ನೀಡಬೇಕಿದೆ. ಈ ಬಗ್ಗೆ ಜಿಲ್ಲೆಯ ರೈತರಿಗೆ ಅರಿವು ಮೂಡಿಸಬೇಕು ಎಂದರು.

ಕೊಪ್ಪಳ ಜಿಲ್ಲಾಧಿಕಾರಿ ನಲಿನ್ ಅತುಲ್ ಅವರು ಮಾತನಾಡಿ, ಪ್ರಸಕ್ತ ಮುಂಗಾರು ಹಂಗಾಮಿನಲ್ಲಿ ಅಗತ್ಯ ಸಿದ್ಧತೆಗಳನ್ನು ಕೈಗೊಳ್ಳಲಾಗುತ್ತಿದ್ದು, ಜಿಲ್ಲೆಯಲ್ಲಿ ಬಿತ್ತನೆ ಬೀಜ ಮತ್ತು ರಸಗೊಬ್ಬರಕ್ಕೆ ಯಾವುದೇ ಕೊರತೆಯಿಲ್ಲ. ಬೇಡಿಕೆಗಿಂತಲು ಶೇ.20 ರಷ್ಟು ಹೆಚ್ಚಿನ ಪ್ರಮಾಣದ ಬೀಜ-ಗೊಬ್ಬರವನ್ನು ದಾಸ್ತಾನು ಇರಲಿದೆ. ಬೀಜ ಮತ್ತು ರಸಗೊಬ್ಬರ ಮಾರಾಟಗಾರರು ಎಂ.ಆರ್.ಪಿ.ಗಿಂತ ಹೆಚ್ಚಿನ ದರಕ್ಕೆ ಬಿತ್ತನೆ ಬೀಜ ಮತ್ತು ರಸಗೊಬ್ಬರಗಳನ್ನು ಮಾರಾಟ ಮಾಡಿರುವ ಬಗ್ಗೆ ಯಾವುದೇ ದೂರು ಬಂದಲ್ಲಿ ಅಂತಹವರ ವಿರುದ್ಧ ಕಾನೂನು ಮೂಲಕ ಕ್ರಮ ಕೈಗೊಳ್ಳಲಾಗುವುದು. ಭತ್ತ ಬೆಳೆಯುವ ಭಾಗಗಳಲ್ಲಿ ಹೆಚ್ಚಿನ ಪ್ರಮಾಣದ ರಸಾಯನಿಕಗಳ ಬಳಕೆಯನ್ನು ತಡೆಯಲು ಈಗಾಗಲೇ ಜಾಗೃತಿ ಮೂಡಿಸಲಾಗುತ್ತಿದೆ. ಜಿಲ್ಲೆಯಲ್ಲಿ ರೇಷ್ಮೆ, ತೋಟಗಾರಿಕೆ, ಪಶುಪಾಲನೆ ಪ್ರಮಾಣವನ್ನು ಹೆಚ್ಚಿಸುವುದರ ಜೊತೆಗೆ ಕೃಷಿ ಮಾರುಕಟ್ಟೆಯನ್ನು ಅಭಿವೃದ್ಧಿ ಪಡಿಸಿ, ಸಮಗ್ರ ಸಾವಯವ ಕೃಷಿಗೆ ಉತ್ತೇಜನ ನೀಡಲು ಪ್ರಯತ್ನಿಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿ ತೋಟಗಾರಿಕೆ ಕ್ಷೇತ್ರವು ಹೆಚ್ಚಾಗುತ್ತಿದೆ ಹಾಗೂ ಪ್ರಾಣಿಗಳ ಸಂಖ್ಯೆಯು ಹೆಚ್ಚಾಗಿದೆ ಎಂದು ಹೇಳಿದರು.

ಕೃಷಿಯೊಂದಿಗೆ ಕೋಳಿ, ಕುರಿ ಮತ್ತು ಧನಕರುಗಳಸಾಕಾಣಿಕೆಹಾಗೂತೋಟಗಾರಿಕೆ ಬೆಳೆಗಳನ್ನು ಬೆಳೆಯುವುದರಿಂದ ಮಣ್ಣಿ ಫಲವತ್ತತೆ ಉತ್ತಮವಾಗಿರುತ್ತದೆ. ಜಿಲ್ಲೆಯಲ್ಲಿ ಈ ರೀತಿಯ ಸಮಗ್ರ ಕೃಷಿ ವ್ಯವಸ್ಥೆಯನ್ನು ಜಾರಿಗೆ ಮಾಡಬೇಂದು ಯೋಜನೆಯನ್ನು ರೂಪಿಸಲಾಗಿದೆ. ಜಿಲ್ಲೆಯ ಸರಿ ಸುಮಾರು 4.50 ಲಕ್ಷ ಹೆಕ್ಟರ್ ಭೂಮಿಯಲ್ಲಿ ವ್ಯವಸಾಯ ಮಾಡಲಾಗುತ್ತಿದ್ದು, ಇದರಲ್ಲಿ 55 ಸಾವಿರ ಹೆಕ್ಟರ್ ಭೂಮಿಯನ್ನು ತೋಟಗಾರಿಕೆ ಕ್ಷೇತ್ರದಲ್ಲಿ ತೊಡಗಿಸಲಾಗಿದೆ. ಕಳೆದ ಐದು ವರ್ಷಗಳಹಿಂದೆ 25 ಸಾವಿರ ಹೆಕ್ಟರ್‌ಗಿಂತಲು ಕಡಿಮೆ ತೋಟಗಾರಿಕೆ ಪ್ರದೇಶವಿತ್ತು. ಮುಂಬರುವ ವರ್ಷಗಳಲ್ಲಿ 1.50 ಲಕ್ಷ ಹೆಕ್ಟರ್ ಪ್ರದೇಶವನ್ನು ತೋಟಗಾರಿಕೆಗೆ ತರಬೇಕೆಂದು ಯೋಜನೆ ರೂಪಿಸಲಾಗಿದ್ದು, ಇದರಿಂದ ರೈತರ ಆದಾಯ ಹೆಚ್ಚಾಗಲಿದೆ. ತೋಟಗಾರಿಕೆ ಟೆಕ್ ಪಾರ್ಕ್ ಹಾಗೂ ರೈಸ್ ಪಾರ್ಕ್ ಸ್ಥಾಪನೆಯಿಂದಾಗಿಯೂ ಜಿಲ್ಲೆಯ ಕೃಷಿ ಮತ್ತು ತೋಟಗಾರಿಕೆ ಕ್ಷೇತ್ರಗಳಲ್ಲಿ ಹೆಚ್ಚಿನ ಅಭಿವೃದ್ಧಿಯಾಗಲಿದೆ ಎಂದರು.

ರಾಷ್ಟ್ರಮಟ್ಟದಪ್ರಶಸ್ತಿಗಾಗಿಜಿಲ್ಲಾಧಿಕಾರಿಗಳಿಗೆ ಸನ್ಮಾನ: 2023-24ನೇ ಸಾಲಿನ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬೀಮಾ ಯೋಜನೆಯಡಿ ಕೊಪ್ಪಳ ಜಿಲ್ಲೆಗೆ ರಾಷ್ಟ್ರಮಟ್ಟದ ಪ್ರಶಸ್ತಿ ಲಭಿಸಿರುವ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ ನಲಿನ್ ಅತುಲ್ ಅವರಿಗೆ ಬೆಂಗಳೂರಿನ ಐಎಟಿ ಸಂಸ್ಥೆ, ಕೊಪ್ಪಳ ಜಿಲ್ಲಾ ಕೃಷಿಕ ಸಮಾಜ ಹಾಗೂ ಕೃಷಿ ಇಲಾಖೆಯಿಂದ ಸನ್ಮಾನಿಸಲಾಯಿತು.

ಪೋಸ್ಟರ್ ಬಿಡುಗಡೆ ಹಾಗೂ ಬಿತ್ತನೆ ಬೀಜ ವಿತರಣೆ: ಕೃಷಿ ಇಲಾಖೆಯಿಂದ ಹೊರತಂದಿರುವ ಡಿಎಪಿ ಬದಲಾಗಿ ಇತರೆ ರಸಗೊಬ್ಬರ ಬಳಕೆಯ ಮಾಹಿತಿಯ ಮತ್ತು ದೇಶಿ ತಳಿಯ ಸಂರಕ್ಷಣೆ ಕುರಿತಾದ ಮಾಹಿತಿಯ ಪೋಸ್ಟರ್‌ಗಳನ್ನು ಬಿಡುಗಡೆ ಮಾಡಲಾಯಿತು. ಇದೇ ಸಂದರ್ಭದಲ್ಲಿ ಮುಂಗಾರು ಹಂಗಾಮಿನ ಬಿತ್ತನೆ ಬೀಜಗಳನ್ನು ರೈತರಿಗೆ ಸಾಂಕೇತಿಕವಾಗಿ ವಿತರಣೆ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಕೊಪ್ಪಳ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ರತ್ನಂ ಪಾಂಡೇಯ, ಜಂಟಿ ಕೃಷಿ ನಿರ್ದೇಶಕರಾದ ಟಿ.ಎಸ್. ರುದ್ರೇಶಪ್ಪ, ಕೃಷಿಕ ಸಮಾಜದ ಕೊಪ್ಪಳ ಜಿಲ್ಲಾಧ್ಯಕ್ಷರಾದ ಶೇಖರಗೌಡ ಮಾಲಿ ಪಾಟೀಲ್, ಕೃಷಿಕ ಸಮಾಜದ ರಾಜ್ಯ ಪ್ರತಿನಿಧಿ ಶಿವಣ್ಣ ಮೂಲಿಮನಿ, ಬೆಂಗಳೂರಿನ ಐಎಟಿ ಕಾರ್ಯದರ್ಶಿ ವೀರಣ್ಣ ಕಂತಾರ, ಗಂಗಾವತಿಯ ಕೃಷಿ ವಿಜ್ಞಾನ ಕೇಂದ್ರ ಮುಖ್ಯಸ್ಥರಾದ ರಾಘವೇಂದ್ರ ಯಲಿಗಾರ ಹಾಗೂ ವಿಜ್ಞಾನಿಗಳು ಕೃಷಿಕ ಸಮಾಜದ ಸದಸ್ಯರು, ಮುನಿರಾಬಾದ್ ತೋಟಗಾರಿಕೆ ಮಹಾವಿದ್ಯಾಲಯದ ಅಧಿಕಾರಿಗಳು, ಕೃಷಿ ಇಲಾಖೆಯ ಜಿಲ್ಲೆಯ ಎಲ್ಲಾ ತಾಲ್ಲೂಕಿನ ಸಹಾಯಕ ನಿರ್ದೇಶಕರು ಸೇರಿದಂತೆ ಕೃಷಿ ಇಲಾಖೆಯ ಸಿಬ್ಬಂದಿ ಉಪಸ್ಥಿತರಿದ್ದರು.

ವಿಕಸಿತ ಕೃಷಿ ಸಂಕಲ್ಪ ಅಭಿಯಾನಕ್ಕೆ ಚಾಲನೆ: ಕಾರ್ಯಕ್ರಮಕ್ಕೂ ಪೂರ್ವದಲ್ಲಿ ಜಿಲ್ಲಾಡಳಿತ ಭವನದ ಆವರಣದಲ್ಲಿ ಕೃಷಿ ಇಲಾಖೆಯಿಂದ ಆಯೋಜಿಸಲಾಗಿರುವ ವಿಕಸಿತ ಕೃಷಿ ಸಂಕಲ್ಪ ಅಭಿಯಾನಕ್ಕೆ ಹಸಿರು ನಿಶಾನೆ ತೋರಿಸುವ ಮೂಲಕ ಶಾಸಕರು ಹಾಗೂ ಜಿಲ್ಲಾಧಿಕಾರಿಗಳು ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಜಿ.ಪಂ ಸಿಇಓ, ಜಿಲ್ಲಾ ಕೃಷಿಕ ಸಮಾಜದವರು, ಕೃಷಿ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿ ಸೇರಿ ಮತ್ತಿತರರಿದ್ದರು.

## ಐಟಿಐ ಪ್ರವೇಶಕ್ಕೆ ಅರ್ಜಿ ಆಹ್ವಾನ

**ಕೊಪ್ಪಳ :** ಯಲಬುರ್ಗಾ ತಾಲ್ಲೂಕಿನ ಯಡ್ಡೋಣಿ ಸರಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ 2025-26ನೇ ಸಾಲಿನ ಪ್ರವೇಶಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ. ಸಂಸ್ಥೆಯಲ್ಲಿ ಫಿಟ್ಟರ್ ಮತು ಎಲೆಕ್ಟ್ರಿಷಿಯನ್ ವೃತ್ತಿಕೋರ್ಸ್‌ಗಳು ಅನುಷ್ಠಾನಗೊಂಡಿದ್ದು, ಪ್ರತಿ ಕೋರ್ಸಿನಲ್ಲಿ 20 ಸ್ಥಾನಗಳು ಲಭ್ಯವಿರುತ್ತವೆ. ಎಸ್‌ಎಸ್‌ಎಲ್‌ಸಿ ಉತ್ತೀರ್ಣಗೊಂಡ ಆಸಕ್ತ ಅಭ್ಯರ್ಥಿಗಳು ಮೇ 28ರೊಳಗೆ ಅಗತ್ಯ ದಾಖಲೆಗಳೊಂದಿಗೆ ವೆಬ್‌ಸೈಟ್ www.cite.karnataka.gov.in ಮೂಲಕ ಅಥವಾ ಕೈಗಾರಿಕಾ ತರಬೇತಿ ಸಂಸ್ಥೆಗೆ ನೇರವಾಗಿ ಭೇಟಿ ನೀಡಿ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಮೊ.ಸಂ. 9113682527, 9008126662, 8217507816 ಗಳಿಗೆ ಸಂಪರ್ಕಿಸಬಹುದು ಎಂದು ಸಂಸ್ಥೆಯ ಪ್ರಾಚಾರ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ರಾಜ್ಯ ಸರ್ಕಾರಿ ನೌಕರರ ಮಕ್ಕಳ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

2024-25 ನೇ ಸಾಲಿನ ಎಸ್ ಎಸ್ ಎಲ್ ಸಿ ಹಾಗೂ ಪಿಯುಸಿ ಯಲ್ಲಿ ಶೇಕಡಾ 90 ಕ್ಕಿಂತ ಹೆಚ್ಚು ಅಂಕಗಳನ್ನು ಗಳಿಸಿರುವ ಇಳಕಲ್ ತಾಲೂಕಿನ ಸರ್ಕಾರಿ ನೌಕರರ ಮಕ್ಕಳು ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಸಲ್ಲಿಸುವಂತೆ ರಾಜ್ಯ ಸರ್ಕಾರಿ ನೌಕರರ ಸಂಘದ ತಾಲೂಕು ಅಧ್ಯಕ್ಷರು ಹಾಗೂ ಕೇಂದ್ರ ಸಂಘದ ರಾಜ್ಯ ಸಂಘಟನಾ ಕಾರ್ಯದರ್ಶಿ ಪರಶುರಾಮ ಎಸ್ ಪಮ್ಮಾರ ಕೋರಿದ್ದಾರೆ.

ಸಂಬಂಧಿಸಿದಂತೆ ಹೇಳಿಕೆಯೊಂದನ್ನು ಬಿಡುಗಡೆ ಮಾಡಿದ್ದು, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಬೆಂಗಳೂರು ಇವರ ವತಿಯಿಂದ ಅರ್ಜಿ ಆಹ್ವಾನಿಸಿದ್ದು, ಇಳಕಲ್ ತಾಲೂಕಿನ ಸರ್ಕಾರಿ ನೌಕರರ ಮಕ್ಕಳು 2024-25ನೇ ಸಾಲಿನ ಎಸ್ ಎಸ್ ಎಲ್ ಸಿ ಹಾಗೂ ಪಿಯುಸಿ ಯಲ್ಲಿ ಶೇಕಡಾ



90 ಕ್ಕಿಂತ ಹೆಚ್ಚು ಅಂಕಗಳನ್ನು ಗಳಿಸಿರುವ ವಿದ್ಯಾರ್ಥಿಗಳು ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಸಲ್ಲಿಸಲು ಅವಕಾಶವಿದ್ದು, ಅರ್ಜಿ ಸಲ್ಲಿಸಲು ಮೇ 31 ಕೊನೆಯ ದಿನವಾಗಿದ್ದು;
**https://ks-geanews.blogspot.com/2025/05/sslc-puc-2025.html**
ಈ ಮೇಲಿನ ಆನ್ ಲೈನ್ ಲಿಂಕ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ.

ವಿದ್ಯಾರ್ಥಿಗಳತಂದೆಅಥವಾತಾಯಿಖಾಯಂ ಸರ್ಕಾರಿ ನೌಕರರಾಗಿರಬೇಕು, ದೃಡಿಕೃತ ಅಂಕಪಟ್ಟಿ ಇರಬೇಕು ಹಾಗೂ ಸಂಘವು ನಿಗದಿಪಡಿಸಿದ ನಮೂನೆಯಲ್ಲಿ ತಾಲೂಕು ಅಧ್ಯಕ್ಷರ ಸಹಿ, ಮೊಹರಿನೊಂದಿಗೆ ಅಗತ್ಯ ದಾಖಲೆಗಳನ್ನು ಅಪಲೋಡ್ ಮಾಡುವಂತೆ ತಾಲೂಕು ಅಧ್ಯಕ್ಷರಾದ ಪರಶುರಾಮ ಎಸ್ ಪಮ್ಮಾರ, ರಾಜ್ಯ ಪರಿಷತ್ ಸದಸ್ಯರಾದ ಈಶ್ವರ ಗಡ್ಡಿ, ಖಜಾಂಚಿಗಳಾದ ಶರಣಗೌಡ ಕೊಣ್ಣೂರ, ಕಾರ್ಯದರ್ಶಿಗಳಾದ ಸಂಗಮೇಶ ಬಂಗಾರಿ ಹಾಗೂ ಸರ್ವ ಪದಾಧಿಕಾರಿಗಳು ವಿನಂತಿಸಿದ್ದಾರೆ.

**ವರದಿ ಕೆ ಎಚ್ ಸೋಲಾಪೂರ**

## ನಿಖಿತ ಮತ್ತು ನಯನಾ ಮದುವೆ ಸಮಾರಂಭ ಮತ್ತೇ ಎಲ್ಲರ ನೆನಪಿನಲ್ಲಿ ಬಂದ ದಿ ಮೋಹನ ಹೊಸಮನಿ

ಬಿ ಬಾಬು



ಇಳಕಲ್ಲಿನ ಖ್ಯಾತ ಉದ್ಯಮಿ ಹಾಗೂ ಎಕ್ಸಪೋರ್ಟರ್ ದಿ ಶ್ರೀ ಮೋಹನ ಹೊಸಮನಿಯವರ ಧರ್ಮಪತ್ನಿ ಶ್ರೀಮತಿ ಜ್ಯೋತಿ ಹೊಸಮನಿ ಹಾಗೂ ಪುತ್ರ ಶ್ರೀ ಪುನೀತ್ ಹೊಸಮನಿ ಹೊಸಪೇಟೆಯ ವಿಜಯಶ್ರೀ ರೆಸಾರ್ಟ್ ದಲ್ಲಿ ನಡೆಸಿದ ಪುತ್ರ ನಿಖಿತ ಮತ್ತು ನಯನಾ ವಿವಾಹ ಸಮಾರಂಭದಲ್ಲಿ ಅಗಲಿದ ಜನನಾಯಕ ದಿ ಮೋಹನ ಹೊಸಮನಿಯವರ ನೆನಪು ಬಹಳಷ್ಟು ಕಾಡಿತು ಎಂದರೆ ಅತಿಶಯೋಕ್ತಿಯಲ್ಲ .

ವಿವಾಹ ನಡೆದ ಸ್ಥಳದಲ್ಲಿ ನಿಂತ ವಾಹನಗಳು ಬಡವ ಬಲ್ಲಿದ ಎನ್ನದೇ ಬಂದ ಆಮಂತ್ರಿತರು ಗೆಳೆಯರು ಸಹೋದ್ಯೋಗಿಗಳು ಜೋಶಿಗಲ್ಲಿಯ ನಿವಾಸಿಗಳು ಎಲ್ಲರ ನೆನಪಿನಲ್ಲಿ ಒಂದು ಕ್ಷಣ ಮೋಹನ ಸುಳಿಯದೇ ಇರಲಿಲ್ಲ ಅವರ ಪಾಲುದಾರ ಸ್ನೇಹಿತರಾದ ಶ್ರೀ ವೆಂಕಟೇಶ ಸಾಕಾ, ಶ್ರೀ ದಿಲೀಪ್ ದೇವಗಿರಿಕರ ಅಲ್ಲದೇ ಮನೆಯ ಪಕ್ಕದ ಶ್ರೀ ಭರತ ಬೋರಾ ಎಲ್ಲರೂ ನಿಂತು ಈ ಮದುವೆ ಸಮಾರಂಭವನ್ನು ಅತ್ಯಂತ ಅಚ್ಚುಕಟ್ಟಾಗಿ ಮಾಡಿ ಎಲ್ಲರಿಂದಲೂ ಭೇಷ್ ಎನಿಸಿಕೊಂಡರು.

ಸಂಸದರಾದ ಶ್ರೀ ಗೋವಿಂದ ಕಾರಜೋಳ ಶ್ರೀ ರಮೇಶ ಜಿಗಜಿಣಗಿ, ಮಾಜಿ ಸಚಿವರಾದ ಶ್ರೀ ಎಚ್ ಆಂಜನೇಯ, ಮಾಜಿ ಶಾಸಕರಾದ ಶ್ರೀ ದೊಡ್ಡನಗೌಡ ಪಾಟೀಲ ಸೇರಿದಂತೆ ಪ್ರಮುಖರು ಈ ಮದುವೆ ಸಮಾರಂಭದಲ್ಲಿ ಭಾಗವಹಿಸಿ ಅದಕ್ಕೆ ಶೋಭೆ ತಂದಿದ್ದರು.

ಪ್ರಥಮ ಪುತ್ರ ಶ್ರೀ ಪುನೀತ್ ಹೊಸಮನಿ ಅತ್ಯಂತ ನಿಗರ್ವಿಯಾಗಿ ಬಂದ ಎಲ್ಲಾ ಅತಿಥಿಗಳನ್ನು ಸ್ವಾಗತಿಸುತ್ತಾ ಉಭಯ ಕುಶಲೋಪರಿ ಕೇಳುತ್ತಾ ತಂದೆಗೆ ತಕ್ಕ ಮಗನಾಗಿ ಹೊರಹೊಮ್ಮುತ್ತಿರುವದು ಹೊಸಮನಿ ಪರಿವಾರಕ್ಕೆ ಕೀರಿಟ ಇಟ್ಟ ಹಾಗೆ ಎಂದು ಘಂಟಾಘೋಷವಾಗಿ ಹೇಳಬಹುದು.

" ನೂಲಿನಂತೆ ಸೀರೆ , ತಾಯಿಯಂತೆ ಮಗಳು ತಂದೆ-ಯಂತೆ ಮಗ" ಎಂಬ ಗಾದೆ ಇಲ್ಲಿ ನಿಜಕ್ಕೂ ಸತ್ಯವಾಗಿದೆ.

## ವಿದ್ಯಾರ್ಥಿಗಳ ಬೀಳ್ಕೊಡುವ ಸಮಾರಂಭ: 'ಸಖಿಲೋಕ' ಶೀರ್ಷಿಕೆಯ ಪ್ರಥಮ ವಾರ್ಷಿಕ ಸಂಚಿಕೆ ಬಿಡುಗಡೆ

**ಜಮಖಂಡಿ :** ಇಲ್ಲಿಯ ಸರಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು ಹಾಗೂ ಸ್ನಾತಕೋತ್ತರ ಕೇಂದ್ರದಲ್ಲಿ ಕಳೆದ ಮೇ 21 ರಂದು ಮಹಾವಿದ್ಯಾಲಯದ ಪ್ರಥಮ ವಾರ್ಷಿಕ ಸಂಚಿಕೆ ಹಾಗೂ ಬಿಡುಗಡೆ ಸಮಾರಂಭ ಮತ್ತು 2024-25 ನೇ ಸಾಲಿನ ಸಾಂಸ್ಕೃತಿಕ, ಕ್ರೀಡಾ, ರೇಂಜರ್ಸ್, ರೆಡ್ಕ್ರಾಸ್ ಹಾಗೂ ಎನ್.ಎಸ್.ಎಸ್. ಘಟಕಗಳ ವಾರ್ಷಿಕ ಕಾರ್ಯ ಚಟುವಟಿಕೆಗಳ ಸಮಾರೋಪ ಸಮಾರಂಭ ಹಾಗೂ ಅಂತಿಮ ವರ್ಷದ ವಿದ್ಯಾರ್ಥಿನಿಯರ ಬೀಳ್ಕೊಡುವ ಸಮಾರಂಭ ಜರುಗಿತು.



ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಡಾ. ವಿಷ್ಣು ಎಂ. ಶಿಂಥೆ ಪ್ರಾಧ್ಯಾಪಕರು, ಶಿಕ್ಷಣ ಅಧ್ಯಯನ ವಿಭಾಗ, ಕ.ರಾ.ಅ.ಮ. ವಿಶ್ವವಿದ್ಯಾಲಯ, ವಿಜಯಪುರ ಇವರು ಮಹಾವಿದ್ಯಾಲಯದ 'ಸಖಿಲೋಕ' ಎಂಬ ಶೀರ್ಷಿಕೆಯ ಪ್ರಥಮ ವಾರ್ಷಿಕ ಸಂಚಿಕೆಯನ್ನು ಬಿಡುಗಡೆಗೊಳಿಸಿ ಮುದ್ರಣ ಅತ್ಯಂತ ಸುಂದರವಾಗಿದೆ ಎಂದರು. ಸಖಿಲೋಕವು ಒಟ್ಟು ಮಾಹಿತಿ ಲೋಕ, ಲೇಖನಲೋಕ, ಕಾವ್ಯಲೋಕ, ಕಥಾಲೋಕ, ಚಿತ್ರ ಲೋಕ ಎಂಬ ಐದು ವಿಭಾಗಗಳಲ್ಲಿ ವಿಂಗಡನೆಯಾಗಿ ಪ್ರತಿಯೊಂದು ಪುಟವೂ ಮಹಾವಿದ್ಯಾಲಯ ನಡೆದು ಬಂದ ದಾರಿ, ಉಪನ್ಯಾಸಕರ ಹಾಗೂ ವಿದ್ಯಾರ್ಥಿಗಳ ಲೇಖನಗಳು, ಕವನಗಳು, ಕಥೆಗಳು ತುಂಬಾ ಸುಂದರವಾಗಿ ಮೂಡಿ ಬಂದಿವೆ. ಸಖಿಲೋಕ ಎಂಬ ವಾರ್ಷಿಕ ಸಂಚಿಕೆಯು ಬಹಳ ವಿದ್ವತ್ತತೆಯಿಂದ ಕೂಡಿದೆ. ಇದರ ಸದುಪಯೋಗವನ್ನು ವಿದ್ಯಾರ್ಥಿಗಳು ಪಡೆದುಕೊಳ್ಳಬೇಕು ಎಂದರು.

ಭ್ರಮೆಯಿಂದ ವಾಸ್ತವದ ಕಡೆಗೆ ಹೋಗುವುದೆ ಬೀಳ್ಕೊಡುಗೆ. ಪದವಿ ಹಂತ ಬಹಳ ಮಹತ್ವ ಪೂರ್ಣವಾಗಿದ್ದು ನಿಮ್ಮ ಬದುಕಿನ ಬದಲಾವಣೆಯನ್ನು ಗುರುತಿಸುವ ಹಂತ ಇದಾಗಿದೆ. ಶಿಕ್ಷಣ ಎಂದರೆ ಓದು ಬರಹವಲ್ಲ, ಅದು ಸಾಕ್ಷರತೆ. ಹಾಗಾಗಿ ವಿದ್ಯಾರ್ಥಿಗಳು ಭ್ರಮಾ ಲೋಕದಲ್ಲಿ ತೇಲಾಡದೇ ವಾಸ್ತವಿಕ ಸ್ಥಿತಿಗತಿಗಳನ್ನು ಅರ್ಥ ಮಾಡಿಕೊಳ್ಳಬೇಕು. ಹೆಣ್ಣುಮಕ್ಕಳಲ್ಲಿ ಅದ್ಭುತವಾದುದನ್ನು ಸಾಧಿಸುವ ಛಲ ಇರಬೇಕು. ನಿಮ್ಮೊಳಗೆ ಇರುವ ನಿಮ್ಮ ಸಾಮರ್ಥ್ಯವನ್ನು ನೀವೆ ಗುರುತಿಸಿಕೊಳ್ಳಬೇಕು ಎಂದು ಹೇಳುತ್ತಾ, ನಾವು ಕಲಿತಂಥ ವ್ಯವಸ್ಥೆಗೂ ಇವತ್ತು ನೀವು ಕಲಿಯುತ್ತಿರುವ ವ್ಯವಸ್ಥೆಗೂ ಬಹಳಷ್ಟು ವ್ಯತ್ಯಾಸ ಇರುವುದನ್ನು ಕಾಣುತ್ತೇವೆ. ಅಂದಿನ ಚಿತ್ರಲೋಕ 'ನಾನೇ ವೀಣೇ ನೀನೆ ತಂತಿ ಅವನೇ ವೈನಿಕ' ಎಂದು ಮುರಿದ ಸಂಸಾರಗಳನ್ನು ಒಂದು ಗೂಡಿಸುವಂತೆ ಮಾಡುತ್ತಿದ್ದವು. ಇಂದು 'ನನ್ನ ಆಟವು ನೀ ನನ್ನ ನೋಟವು ನೀ ನನ್ನ ಪಾಠವು ನೀ ನಾ ಉಡುವ ಉಡುಗೆಯು ನೀ' ಎಂದು ಭ್ರಮಾ ಲೋಕದಲ್ಲಿ ವಿದ್ಯಾರ್ಥಿಗಳನ್ನು ಕೊಂಡುಯ್ಯುತ್ತವೆ. ಇದನ್ನು ನೀವು ತಿರಸ್ಕರಿಸಿ ನಿಮ್ಮಲ್ಲಿರುವ ಅಂತಃಶಕ್ತಿಯ ಮೂಲಕ ಇಚ್ಚಾಶಕ್ತಿಯನ್ನು ಹೊಂದಿ ನಿರಂತರವಾಗಿ ಕಲಿಸುವ ಗುರುವಿನೊಂದಿಗೆ ಸಂಪರ್ಕವನ್ನು ಹೊಂದಿ ನಿಮ್ಮ ಬದುಕನ್ನು ಸುಂದರಗೊಳಿಸಿಕೊಳ್ಳಿ ಎಂದು ಹೇಳಿದರು.

ಇನ್ನೋರ್ವ ಅತಿಥಿಗಳಾದ ಶ್ರೀ ಎಸ್. ಎಮ್. ಹಾದಿಮನಿ ಪ್ರಾಂಶುಪಾಲರು ಸ.ಪ್ರ.ದ. ಕಾಲೇಜು, ಮುಧೋಳ ಇವರು ಆಗಮಿಸಿದ್ದರು. ಅವರು ಅಂತಿಮ ವರ್ಷದ ವಿದ್ಯಾರ್ಥಿನಿಯರನ್ನು ಉದ್ದೇಶಿಸಿ ಮಾತನಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಮಹಾವಿದ್ಯಾಲಯದ ಪ್ರಾಚಾರ್ಯೆ ಡಾ. ಸುನಂದಾ ಎಸ್. ಶಿರೂರ ಅವರು ವಿದ್ಯಾರ್ಥಿ ಜೀವನದಲ್ಲಿ ಪಠ್ಯಪುಸ್ತಕದ ಪಾಠಗಳಷ್ಟೆ ಸಾಕಾಗದು. ವ್ಯಕ್ತಿತ್ವವನ್ನು ಪೂರ್ಣವಾಗಿ ರೂಪಿಸುವಲ್ಲಿ ಪಠ್ಯೇತರ ಚಟುವಟಿಕೆಗಳೂ ಕೂಡ ಮಹತ್ತರ ಪಾತ್ರ ವಹಿಸುತ್ತವೆ. ಶಿಕ್ಷಣ ಸಂಸ್ಥೆಗಳಲ್ಲಿ ನಡೆಯುವ ಹಬ್ಬಗಳು, ಸ್ಪರ್ಧೆಗಳು, ಶಿಬಿರಗಳು, ಪ್ರವಾಸಗಳು, ನಾಟಕ, ಭಾಷಣ, ಕ್ರೀಡೆ, ಸಾಂಸ್ಕೃತಿಕ ಕಾರ್ಯಕ್ರಮಗಳುಮೊದಲಾದವುಗಳೆಲ್ಲವೂ ವಿದ್ಯಾರ್ಥಿಗಳಲ್ಲಿರುವ ಸುಪ್ತ ಪ್ರತಿಭೆಯನ್ನು, ಸಾಮರ್ಥ್ಯವನ್ನು ಹೊರಹಾಕುತ್ತವೆ. ಇಂಥ ಚಟುವಟಿಕೆಗಳನ್ನು ವರ್ಷಾಂತ್ಯದಲ್ಲಿ ನಡೆಸಿ, ವಿಜೇತರಿಗೆ ಸನ್ಮಾನಿಸುವ ಸಮಾರಂಭವೇ "ವಿವಿಧ ಚಟುವಟಿಕೆಗಳ ಸಮಾರೋಪ ಸಮಾರಂಭ". ಎಂದು ಹೇಳಿದರು. ಈ ಸಮಾರಂಭವು ಕೇವಲ ಪ್ರಶಸ್ತಿ ಪ್ರದಾನ ಕಾರ್ಯಕ್ರಮವಲ್ಲ; ಇದು ವಿದ್ಯಾರ್ಥಿಗಳ ಸಾಧನೆಗಳಿಗೆ ಗೌರವ ಸಲ್ಲಿಸುವ ದಿನವೂ ಹೌದು. ವಿದ್ಯಾರ್ಥಿಗಳು ಅವಿರತ ಶ್ರಮ, ಸಮಯ ನಿರ್ವಹಣೆ, ತಂಡ ಭಾವನೆ, ನಾಯಕತ್ವ, ಹಾಗೂ ಸೃಜನಾತ್ಮಕತೆಯನ್ನು ಈ ಚಟುವಟಿಕೆಗಳಲ್ಲಿ ಅಭ್ಯಾಸ ಮಾಡುತ್ತಿರುತ್ತಾರೆ. ಈ ಅನುಭವಗಳು ಅವರು ಜೀವನದ ಹಾದಿಯಲ್ಲಿ ಎದುರಿಸಬೇಕಾಗುವ ಸವಾಲುಗಳಿಗೆ ಸಿದ್ಧರಾಗಲು ಸಹಾಯ ಮಾಡುತ್ತವೆ. ಶಿಕ್ಷಕರ ಮಾರ್ಗದರ್ಶನ, ಸಂಸ್ಥೆಯ ಸಹಕಾರ ಹಾಗೂ ವಿದ್ಯಾರ್ಥಿಗಳ ಉತ್ಸಾಹದ ಫಲವಾಗಿ ಈ ಚಟುವಟಿಕೆಗಳು ಯಶಸ್ವಿಯಾಗುತ್ತವೆ. ಈ ಕಾರ್ಯಕ್ರಮವು ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸವನ್ನು ಹುಟ್ಟಿಸುತ್ತದೆ. ಸಖಿಲೋಕವು ಮಹಾವಿದ್ಯಾಲಯದ ಪ್ರಥಮ ವಾರ್ಷಿಕ ಸಂಚಿಕೆಯಾಗಿದ್ದು ಸಂಚಿಕೆಯನ್ನು ಹೊರತರಲು ಶ್ರಮ ವಹಿಸಿದ ಡಾ. ವೈ. ವೈ. ಕೊಕ್ಕನವರ ಹಾಗೂ ಎಲ್ಲಾ ಸಂಪಾದಕ ಮಂಡಳಿಯ ಕಾರ್ಯವನ್ನು ಅವರು ಅಭಿನಂದಿಸಿದರು.

ಈ ಸಂದರ್ಭದಲ್ಲಿ ಮಹಾವಿದ್ಯಾಲಯದ ವಿದ್ಯಾರ್ಥಿನಿಯರಾದ ಕು. ಭಾಗ್ಯಾ, ಮೇಘಾ, ಪುಷ್ಪಾ ಮೊದಲಾದವರು ತಮ್ಮ ಅನಿಸಿಕೆಯನ್ನು ವ್ಯಕ್ತಪಡಿಸುತ್ತ ಭಾವುಕರಾದರು.

ಇದೇ ಸಂದರ್ಭದಲ್ಲಿ ಮುಖ್ಯ ಅತಿಥಿಗಳಾದ ಡಾ. ವಿಷ್ಣು ಎಂ. ಶಿಂಥೆ, ಎಸ್. ಎಮ್. ಹಾದಿಮನಿ, ಶ್ರೀಮತಿ ಎ. ವಾಯ್. ಮಬ್ರುಮಕರ, ಮಣಿಗಾರ ಹಾಗೂ ಕ್ರೀಡಾ ಕ್ಷೇತ್ರದಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿನಿಯರನ್ನು ಸನ್ಮಾನಿಸಲಾಯಿತು. ಕು. ಅಕ್ಷತಾ ಶಿರಗುಪ್ಪಿ ಸೊಗಸಾಗಿ ನಿರೂಪಿಸಿದರು.

ಡಾ. ಅರುಣ ವಾಯ್. ಕಾಂಬಳೆ ವರದಿ ವಾಚನ ಮಾಡಿದರು. ಸಾಂಸ್ಕೃತಿಕ ಬಹುಮಾನ ವಿತರಣೆಯನ್ನು ಶ್ರೀಮತಿ ಸುಮಾ ವೈ. ಎನ್. ಮಾಡಿದರು. ಕ್ರೀಡಾ ಬಹುಮಾನ ವಿತರಣೆಯನ್ನು ಎಸ್. ಕೆ. ಡೇಂಬರೆ ಮಾಡಿದರು. ರೆಡ್ಕ್ರಾಸ್ ಬಹುಮಾನ ವಿತರಣೆಯನ್ನು ಎ. ಎಸ್. ಪೂಜಾರಿ ಮಾಡಿದರು. ಕು. ಪುಷ್ಪಾ ಹೊಸಟ್ಟಿ ಕೊನೆಯಲ್ಲಿ ವಂದಿಸಿದರು.

ಕಾರ್ಯಕ್ರಮದಲ್ಲಿಡಾ.ವಿ.ಆರ್.ದಳವಾಯಿ, ಆರ್. ಎಸ್. ಜಾಧವ, ಶ್ರೀಮತಿ ಶ್ರೀಮಯಿ ಎನ್., ಆರ್. ಎಚ್. ಹಳ್ಳಿ, ಯು. ಎಸ್. ದೇಸಾಯಿ, ಡಾ. ಎಸ್. ಎಸ್. ಸಿದ್ದಾಪೂರ, ಡಾ. ಎಸ್. ಎನ್. ಬಜಂತ್ರಿ, ಡಾ. ಎಸ್. ಎನ್. ಮಣಕವಾಡ, ಶ್ರೀಮತಿ ಶಿವಲೀಲಾ ಎಚ್., ಪ್ರೊ. ಎ. ಎಸ್. ಹಿರೇಮಠ, ಡಾ. ಎಮ್. ಎಸ್. ಹಡಪದ, ಶ್ರೀಮತಿ ಸವಿತಾ ಪಾಟೀಲ, ಡಾ. ಎಮ್. ಎಮ್. ಅಂಬಲಿ, ಡಾ. ಸಿ. ವಿ. ಗುಣದಾಳ, ಡಾ. ಎ. ಆಯ್. ಮಯರ, ಶ್ರೀಮತಿ ಅನಿತಾ ಕೋಲಾರ, ಶ್ರೀಮತಿ ಜಬೀನಾ ಮೌಲ್ವಿ ಹಾಗೂ ಇನ್ನೂ ಅನೇಕರು ಉಪಸ್ಥಿತರಿದ್ದರು.


## ವಿಶ್ವಮಾನವ ಸಾಂಸ್ಕೃತಿಕ ಪ್ರತಿಷ್ಠಾನದ ವತಿಯಿಂದ ಶಿಕ್ಷಕ ಚಂದ್ರಶೇಖರಯ್ಯ ನವರಿಗೆ ಉತ್ತಮ ಶಿಕ್ಷಕ ಪ್ರಶಸ್ತಿ ಪ್ರಧಾನ



**ಬೆಂಗಳೂರು :** ವಿಶ್ವಮಾನವ ಸಾಂಸ್ಕೃತಿಕ ಪ್ರತಿಷ್ಠಾನದ ವತಿಯಿಂದ ರವೀಂದ್ರ ಕಲಾಕ್ಷೇತ್ರದಲ್ಲಿ ಏರ್ಪಡಿಸಿದ್ದ ಕನ್ನಡ ಗೀತೋತ್ಸವ ಮತ್ತು ರಾಜ್ಯಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ ಪ್ರದಾನ ಸಮಾರಂಭವು ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷರಾದ ಡಾ.ಆರ್.ಕೆ.ನಲ್ಲೂರು ಪ್ರಸಾದ್ ಅವರು ಸಮಾರಂಭವನ್ನು ಜ್ಯೋತಿ ಬೆಳಗಿಸುವ ಮೂಲಕ ಶಿಕ್ಷಕರು ಮತ್ತು ಗಾಯಕರು ವಿದ್ಯಾರ್ಥಿಗಳಗೂಡಿ ಉದ್ಘಾಟಿಸಿದರು. ಸಮಾರಂಭದಲ್ಲಿ ಸರ್ವರನ್ನು ಸ್ವಾಗತಿಸಿ ಪ್ರಾಸ್ತಾವಿಕ ನುಡಿಗಳನ್ನಾಡಿದ ಪ್ರತಿಷ್ಠಾನದ ಅಧ್ಯಕ್ಷ ಎಂ.ಪುಟ್ಟರಾಜು. ಕಳೆದ 13 ವರ್ಷಗಳಿಂದ ಕಲೆ ಸಾಹಿತ್ಯ ಸಂಗೀತ ಶಿಕ್ಷಣ ಕ್ಷೇತ್ರದಲ್ಲಿನ ಯುವಜನಕ್ಕೆ ಉತ್ತಮ ಸಂದೇಶ ನೀಡುವ ಮೂಲಕ ನಾಡಿನ ಪ್ರತಿಷ್ಠಿತ ಸಾಧಕರನ್ನು ಗುರುತಿಸಿ ಸನ್ಮಾನ ಮತ್ತು ಪ್ರಶಸ್ತಿ ನೀಡಿ ಗೌರವಿಸಿತ್ತ ಬಂದಿದ್ದೇವೆ. ಎಂದು ತಿಳಿಸಿದರು. ಸಮಾರಂಭದಲ್ಲಿ ಶಿಕ್ಷಕರಾದ ಚಂದ್ರಶೇಖರಯ್ಯ.ರವಿಕುಮಾರ್. ಟಿ.ಎಮ್.ಪದ್ಮವತಿ. ಎಸ್. ಅನಿತಾ. ಎಸ್.ಮಮತ. ರವರಿಗೆಉತ್ತಮಶಿಕ್ಷಕ.(ಬೇಸ್ಟ್‌ಟೀಚರ್)ಪ್ರಶಸ್ತಿಯನ್ನು ಸಮಾಜ ಸೇವಕರಾದ ಡಾ.ಸಿ.ಜಯಲಕ್ಷ್ಮಿ ರವರು ಪ್ರದಾನ ಮಾಡಿ ಗೌರವಿಸಿದರು. ಸಮಾರಂಭದಲ್ಲಿ ಬೆಂಗಳೂರಿನ ವಿಶ್ವವಿದ್ಯಾಲಯದ ಪ್ರಾಧ್ಯಾಪಕರು ಕವಿಗಳಾದ ಡಾ.ಕಾ.ವೆಂ.ಶ್ರೀನಿವಾಸಮೂರ್ತಿ. ಬೆಂಗಳೂರಿನ ಕೆಐಎಡಿಬಿ ಸ.ಕಾ.ಮಂಜುನಾಥ ಮುಧುಕವಿ. ನಳಿನಿ ಪ್ರಸಾದ್.ಹಾಗೂ ಪ್ರತಿಷ್ಠಾನದ ಉಪಾಧ್ಯಕ್ಷರಾದ ಮಧುಮಾಲತಿ ಉಪಸ್ಥಿತರಿದ್ದರು.

# ಉತ್ತರ ಕರ್ನಾಟಕದ ಅಭಿವೃದ್ಧಿಯಲ್ಲಿ ಸಂತ್ರಸ್ತರ ತ್ಯಾಗ ಅಡಗಿದೆ

**ಬೀಳಗಿ :** ಉತ್ತರ ಕರ್ನಾಟಕದ ಅಭಿವೃದ್ಧಿಗಾಗಿ, ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಮನೆ–ಮಠ, ಆಸ್ತಿ–ಪಾಸ್ತಿ ಕಳೆದುಕೊಂಡು ರಾಜ್ಯದ ಆದಾಯ ಹೆಚ್ಚಿಸುವಲ್ಲಿ ಸಂತ್ರಸ್ಥರ ತ್ಯಾಗ ಮತ್ತು ಕೊಡುಗೆ ಅಪಾರವಾಗಿದೆ. ಉತ್ತರ ಕರ್ನಾಟಕ ಭಾಗದ ಜನರಿಗೆ ಎಲ್ಲ ಸರ್ಕಾರಗಳು ಮಲತಾಯಿ ಧೋರಣೆ ಅನುಸರಿಸುತ್ತಿದ್ದು, ಸರ್ಕಾರಕ್ಕೆ ಎಚ್ಚರಿಕೆ ಗಂಟೆ ನೀಡುವ ದಿಶೆಯಲ್ಲಿ ಕನ್ನಡ ಜಾನಪದ ಪರಿಷತ್ತಿನಿಂದ ಸರ್ಕಾರವನ್ನು ಎಚ್ಚರಿಸುವ ಕೆಲಸ ಮಾಡಬೇಕಾಗಿದೆ ಎಂದು ಮಾಜಿ ಸಚಿವ ಎಸ್.ಆರ್.ಪಾಟೀಲ ಹೇಳಿದರು.




ತಾಲೂಕಿನ ಅನಗವಾಡಿ ಗ್ರಾಮದ ಬಸವೇಶ್ವರ ಬಯಲು ರಂಗ ಮಂದಿರದಲ್ಲಿ ಕನ್ನಡ ಜಾನಪದ ಪರಿಷತ್ ಜಿಲ್ಲಾ ಘಟಕ ಬಾಗಲಕೋಟೆ ಇವರ ಆಶ್ರಯದಲ್ಲಿ ಹಮ್ಮಿಕೊಂಡ ಬಾಗಲಕೋಟೆ ಜಿಲ್ಲಾ ದ್ವಿತೀಯ ಕನ್ನಡ ಜಾನಪದ ಸಮ್ಮೇಳನ ಅನಗವಾಡಿ–2025 ಕಾರ್ಯಕ್ರಮವನ್ನು ಡೊಳ್ಳು ಬಾರಿಸುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ಈ ನೆಲದ ಮೂಲ ಸಂಸ್ಕೃತಿ ಮಾನವ ಜನಾಂಗದ ಹುಟ್ಟಿನೊಂದಿಗೆ ಹುಟ್ಟಿ ಬಂದ ಅಪರಿಮಿತ ಜ್ಞಾನವೇ ಜಾನಪದ. ತಲೆತಲಾಂತರದಿಂದಲೂ ಮೌಖಿಕ ಪರಂಪರೆಯಾಗಿ ಉಳಿದು ಬಂದಿರುವ ಶ್ರೇಷ್ಠ ಜ್ಞಾನವೇ ಜಾನಪದವಾಗಿದೆ.

ಜಾನಪದ ಉಳಿಸಿ ಬೆಳೆಸುವಲ್ಲಿ ಯುವಕರು ಮುಂದಾಗಬೇಕಿದೆ. ಯುವಕರನ್ನು ಜಾನಪದದತ್ತ ಕರೆತರುವ ಕೆಲಸವು ನಡೆಯಬೇಕಿದೆ ಎಂದರು.

ಕನ್ನಡ ಜಾನಪದ ಪರಿಷತ್ ರಾಜ್ಯಾಧ್ಯಕ್ಷ ಡಾ. ಎಸ್. ಬಾಲಾಜಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಜಾನಪದ ಕಲೆ ಮತ್ತು ಸಾಹಿತ್ಯ ಉಳಿವಿಗೆ ಸರ್ಕಾರವು ಮುಂದಾಗುತ್ತಿಲ್ಲ. ಕಲಾವಿದರಿಗೆ ಸರಿಯಾದ ರೀತಿಯಲ್ಲಿ ಗೌರವ ಸಿಗುತ್ತಿಲ್ಲ. ವಯೋಮಿತಿ ಸಡಿಲಿಸಿದರೆ ಮಾತ್ರ ಹಿರಿಯ ಕಲಾವಿದರಿಗೆ ಅನುಕೂಲವಾಗಲಿದೆ. ಬೇರೆ ರಾಜ್ಯದಲ್ಲಿ ಕಲಾವಿದರಿಗೆ ಹತ್ತು ಸಾವಿರ ಪಿಂಚಣಿ ದೊರೆಯುತ್ತಿದೆ. ಇಲ್ಲಿ ಕೇವಲ ಎರಡು ಸಾವಿರ ಕೊಡುತ್ತಾರೆ. ಅದರ ಬದಲಾಗಿ ಕನಿಷ್ಟವಾಗಿ ಐದು ಸಾವಿರ ಪಿಂಚಣಿ ಮಾಡಬೇಕು. ಕಲಾವಿದರು ಮರಣ ಹೊಂದಿದ್ದಲ್ಲಿ ಅವರಿಗೆ ಗ್ರಾಮ ಪಂಚಾಯತ ಮಟ್ಟದಲ್ಲಿ ಧನ ಸಹಾಯ ಮಾಡುವ ಕೆಲಸವಾಗಬೇಕು. ಸರ್ಕಾರವು ಕಲಾವಿದರ ಸಮಸ್ಯೆಗಳಿಗೆ ಸ್ಪಂದಿಸುವ ಕೆಲಸ ಮಾಡಬೇಕಾಗಿದೆ. ಜಿಲ್ಲಾ ಮಟ್ಟದ ದ್ವಿತೀಯ ಸಮ್ಮೇಳನವು ಯಶಸ್ವಿಯಾಗಿ ನೆರವೇರಿದ್ದು ಇಲ್ಲಿಯ ಜನರ ಪ್ರೀತಿ ವಿಶ್ವಾಸ ಇದಕ್ಕೆ ಸಾಕ್ಷಿಯಾಗಿದೆ ಎಂದರು.

ಸಮ್ಮೇಳನ ಸರ್ವಾಧ್ಯಕ್ಷ ಜಾನಪದ ಆಶುಕವಿ ಸಿದ್ದಪ್ಪ ಬಿದರಿ ಮಾತನಾಡಿ, ಜಾನಪದ ಉಳಿವಿಗೆ ಪ್ರತಿಯೊಂದು ಮನೆ ಹಾಗೂ ಮನದಲ್ಲಿ ಸಾಹಿತ್ಯದ ಅರಿವು ಮೂಡಬೇಕಾಗಿದೆ.

ಹಿಂದೆ ಜಾನಪದಗಳಿಗೆ ಹೆಚ್ಚಿನ ಮಹತ್ವ ಇತ್ತು. ಆದರೆ ಇಂದಿನ ದಿನಮಾನದಲ್ಲಿ ಬೇರೆ ಬೇರೆ ಆಚಾರ–ವಿಚಾರಗಳಿಗೆ ಯುವ ಜನತೆ ಮಾರುಹೋಗಿ ನಶಿಸಿ ಹೋಗುವ ಸ್ಥಿತಿಯಲ್ಲಿ ಜಾನಪದವಿದ್ದು ಅವುಗಳನ್ನು ಉಳಿಸಿ ಬೆಳೆಸುವಲ್ಲಿ ಕನ್ನಡ ಜಾನಪದ ಪರಿಷತ್ ತಾಯಿಯಾಗಿ ಕಾರ್ಯನಿರ್ವಹಿಸುತ್ತಿದೆ ಎಂದರು.

ಉದ್ಯಮಿ ಲಕ್ಷ್ಮಣ ನಿರಾಣಿ ಜಾನಪದ ಬಂಡಿ ಸ್ಮರಣ ಸಂಚಿಕೆ ಬಿಡುಗಡೆಗೊಳಿಸಿ ಮಾತನಾಡಿದರು. ಕನ್ನಡ ಜಾನಪದ ಪರಿಷತ್ ಜಿಲ್ಲಾಧ್ಯಕ್ಷ ಡಿ. ಎಂ. ಸಾವಕಾರ ಪ್ರಾಸ್ತಾವಿಕವಾಗಿ ಮಾತನಾಡಿದರು.

ಸಮ್ಮೇಳನಾಧ್ಯಕ್ಷ ಜಾನಪದ ಆಶುಕವಿ ಸಿದ್ದಪ್ಪ ಬಿದರಿಯವರ ಭವ್ಯ ಮೆರವಣಿಗೆಗೆ ಪಿ.ಕೆ.ಪಿ.ಎಸ್. ಅಧ್ಯಕ್ಷ ಎಂ. ಬಿ. ಕಂಬಿ ಡೊಳ್ಳು ಬಾರಿಸಿ ಚಾಲನೆ ನೀಡಿದರು. ಗ್ರಾಮದ ಪ್ರಮುಖ ಬೀದಿಯಲ್ಲಿ ಆರತಿ, ಕುಂಭಮೇಳ, ವಿವಿಧ ಕಲಾ ತಂಡಗಳ ಮೂಲಕ ವರುಣನ ಜಿಟಿ ಜಿಟಿ ಸಿಂಚನದ ಮಧ್ಯೆಯೂ ಅದ್ದೂರಿಯಾಗಿ ನಡೆಯಿತು.

ಪೂರ್ಣಾನಂದಾಶ್ರಮದ ಮಾತೋಶ್ರೀ ಅನಸೂಯಾ ಅವರು ಸಾನಿಧ್ಯ ವಹಿಸಿದ್ದರು. ಗ್ರಾಮ ಪಂಚಾಯತ್ ಅಧ್ಯಕ್ಷೆ ಹುಚ್ಚವ್ವ ಸಿ. ಮಾದರ, ಕಜಾಪ ರಾಜ್ಯ ಕಾರ್ಯದರ್ಶಿ ಕೆ. ಎಸ್. ಕೌಜಲಗಿ, ಕಾರ್ಯದರ್ಶಿ ಆರ್. ಬಿ. ನಬಿವಾಲೆ, ಸುರೇಶ ವಸ್ತ್ರದ, ಮಲ್ಲಪ್ಪ ಮೇಟಿ, ಎಂ. ಜಿ. ಕಂಬಿ, ಆರ್. ಎಚ್. ಮೇಟಿ, ಡಾ. ರಮೇಶ ಅಕ್ಕಿಮರಡಿ, ಬಿ. ಎಂ. ಸಾಹುಕಾರ, ನ್ಯಾಯವಾದಿ ಅಶೋಕ ನಾಯಕ, ಎಂ. ಎಸ್. ಅಂಗಡಿ, ಬಸವರಾಜ ನಾಯ್ಕ, ಎಂ. ಬಿ. ತಾಂಬೋಳಿ, ಶಿವಾನಂದ ಹಿರೇಮಠ, ಎಚ್. ಎಸ್. ಕಾಳಿ, ಶೇಖರ ಗೊಳಸಂಗಿ ಮತ್ತಿತರರು ಉಪಸ್ಥಿತರಿದ್ದರು.

# ಜಾನಪದ ಸಮ್ಮೇಳನದ ಸಮಾರೋಪ

**ಬೀಳಗಿ :** ಓದಲು ಬರೆಯಲು ಬರದಿದ್ದರೂ 25 ಕೃತಿಗಳನ್ನು ರಚಿಸುವ ಮೂಲಕ ಜಾನಪದ ಆಶುಕವಿ ಸಿದ್ದಪ್ಪ ಬಿದರಿ ಜನಮಾನಸದಲ್ಲಿ ನೆಲೆನಿಂತಿದ್ದು, ಓರ್ವ ಸಮರ್ಥ ವ್ಯಕ್ತಿಯನ್ನು ಈ ಸಮ್ಮೇಳನಕ್ಕೆ ಸರ್ವಾಧ್ಯಕ್ಷರನ್ನಾಗಿ ಆಯ್ಕೆ ಮಾಡಿದ ಶ್ರೇಯಸ್ಸು ಕಜಾಪ ಜಿಲ್ಲಾಧ್ಯಕ್ಷ ಡಿ. ಎಂ. ಸಾವಕಾರ ಮತ್ತವರ ತಂಡಕ್ಕೆ ಸಲ್ಲುತ್ತದೆ ಎಂದು ಶಾಸಕ ಜೆ. ಟಿ. ಪಾಟೀಲ ಹೇಳಿದರು.




ತಾಲೂಕಿನ ಅನಗವಾಡಿ ಗ್ರಾಮದಲ್ಲಿ ಕನ್ನಡ ಜಾನಪದ ಪರಿಷತ್ ಜಿಲ್ಲಾ ಘಟಕ ಬಾಗಲಕೋಟೆ ವತಿಯಿಂದ ಆಯೋಜಿಸಿದ್ದ ಬಾಗಲಕೋಟೆ ಜಿಲ್ಲಾ ದ್ವಿತೀಯ ಕನ್ನಡ ಜಾನಪದ ಸಮ್ಮೇಳನದ ಸನ್ಮಾನ ಮತ್ತು ಸಮಾರೋಪ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಬಾಯಿಯಿಂದ ಬಾಯಿಗೆ ಅಂದರೆ ನಮ್ಮ ಪೂರ್ವಜರು ಹಾಡುತ್ತಿದ್ದ ಹಂತಿಪದ, ಸೋಬಾನೆ ಪದ ಸೇರಿದಂತೆ ವಿವಿಧ ಪದಗಳೇ ಜಾನಪದ. ಇಂಥ ಹಾಡುಗಳನ್ನು ಉಳಿಸಿ ಬೆಳೆಸುವುದರ ಜೊತೆಗೆ ಕಲಾವಿದರನ್ನು, ಸಾಧಕರನ್ನು ಗೌರವಿಸುವಂಥ ಕೆಲಸವನ್ನು ಸಾವಕಾರ ಮಾಡುತ್ತಿದ್ದಾರೆಂದು ಶ್ಲಾಘಿಸಿದರು.

ಗಿರಿಸಾಗರದ ರುದ್ರಮುನಿ ಶಿವಾಚಾರ್ಯ ಮಹಾಸ್ವಾಮಿಗಳು ಸಾನಿಧ್ಯ ವಹಿಸಿ ಮಾತನಾಡಿ, ನಮ್ಮ ನೆಲೆಯನ್ನು ತೋರಿಸುವಂಥ ಜಾನಪದ ಪುರಾತನವಾದದ್ದು. ಅದು ಜನರ ಕಿವಿಯಿಂದ ಕಿವಿಗೆ ಹರಡುತ್ತ ಬಂದಿದೆ. ಜಾನಪದದಲ್ಲಿ ದೇವರು ಮತ್ತು ಧರ್ಮವನ್ನು ನಿಂದನೆ ಮಾಡಿಲ್ಲ. ಮಕ್ಕಳಲ್ಲಿ ಸಂಸ್ಕಾರಗಳು ಬರಬೇಕಿದ್ದರೆ ಜಾನಪದ ಸಮ್ಮೇಳನಗಳು ಅವಶ್ಯಕ ಎಂದು ಹೇಳಿದರು.

ಇಂದು ಜಾನಪದದ ಹೆಸರಿನಲ್ಲಿ ದೃಶ್ಯ ಮಾಧ್ಯಮಗಳು ನೋಡಲು ಮತ್ತು ಕೇಳಲು ಕೂಡ ಅಸಹ್ಯವಾಗುವಂಥ ಅಶ್ಲೀಲ ಮಾತುಗಳನ್ನು ಬಳಸುತ್ತಿದ್ದು, ಇದು ಸಮಾಜಕ್ಕೆ ತಪ್ಪು ಸಂದೇಶ ಕೊಡುತ್ತಿದೆ ಎಂದು ವಿಷಾದಿಸಿದರು.

ನಿವೃತ್ತ ಪ್ರಾಧ್ಯಾಪಕ ಎನ್. ಎಂ. ಕೂಗಲಿ ಅಭಿನಂದನಾಪರ ಮಾತನಾಡಿ, ಧಾರಾಕಾರ ಮಳೆಯ ನಡುವೆಯೂ ಅರ್ಥಪೂರ್ಣವಾಗಿ ನಡೆದ ಸಮ್ಮೇಳನದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಅರವತ್ತಕ್ಕೂ ಹೆಚ್ಚು ಸಾಧಕರನ್ನು ಗುರುತಿಸಿ ಗೌರವಿಸಿದ್ದು ಶ್ಲಾಘನೀಯ ಕಾರ್ಯವೆಂದು ಹೇಳಿದರು.

ನಿವೃತ್ತ ಡಿಡಿಪಿಐ ಎಂ. ಜಿ. ದಾಸರ ಸಮಾರೋಪ ನುಡಿ ಹೇಳಿ, ವರುಣನ ಸಿಂಚನದ ಮಧ್ಯೆಯೂ ಸರ್ವಾಧ್ಯಕ್ಷರ ಮೆರವಣಿಗೆ ಪ್ರಾರಂಭಿಸಿ ಯಶಸ್ವಿಗೊಳಿಸಿ, ಉದ್ಘಾಟನೆ, ಗೋಷ್ಠಿ, ಕಲಾಪ್ರದರ್ಶನ, ಸಾಧಕರನ್ನು ಸನ್ಮಾನಿಸಿ ಗೌರವಿಸುವ ಮೂಲಕ ಅರ್ಥಪೂರ್ಣವಾದ ಯಶಸ್ವಿ ಸಮ್ಮೇಳನ ಇದಾಗಿದೆ ಎಂದರು.

ಇದೇ ಸಂದರ್ಭದಲ್ಲಿ ಜನಪದ ಕಾವ್ಯ–ಕುಂಚ ಸಿಂಚನದಲ್ಲಿ ಕವಿ ಡಿ. ಎಂ. ಸಾವಕಾರ ಕವಿತೆ ವಾಚನ ಮಾಡಿದರೆ, ಶಿವಾನಂದ ಮಾದರ ಗಾಯನಕ್ಕೆ ಶಿವಾನಂದ ಹಿರೇಮಠ ಕುಂಚ ಸಿಂಚನ ಮಾಡಿದರು.

ಸಮ್ಮೇಳನದಲ್ಲಿ ಜಿಲ್ಲೆಯ ವಿವಿಧೆಡೆಯಿಂದ ಆಗಮಿಸಿದ ವಿವಿಧ ಪ್ರಕಾರದ ಐವತ್ತಕ್ಕೂ ಹೆಚ್ಚು ಕಲಾತಂಡಗಳು ತಮ್ಮ ಕಲಾಪ್ರದರ್ಶನ ಮಾಡುವ ಮೂಲಕ ನೆರೆದವರ ಗಮನ ಸೆಳೆದರು.

ಪಿ.ಕೆ.ಪಿ.ಎಸ್. ಅಧ್ಯಕ್ಷ ಎಂ. ಬಿ. ಕಂಬಿ, ಈರಣ್ಣ ದುಂ. ಗಾಣಗೇರ, ಪೀರಸಾಬ ನದಾಫ, ಡಾ. ಎಸ್. ಕೆ. ಬಂಗಾರಿ, ನಿಂಗರಾಜ ಮಬ್ರುಮಕರ, ಫಕೀರಯ್ಯ ಮಠಪತಿ, ಆರ್. ವಿ. ಅಂಗಡಿ, ಸಂಗಮೇಶ ಶಾಂತಗಿರಿ, ಮಹೇಶ ಮಾದರ, ರಮೇಶ ಮಾದರ, ಬಸವ್ವ ಹೆಬ್ಬಾಳ, ಸುಲೋಚನಾ ಗಿರಿಯನ್ನವರ, ಇಂದ್ರವ್ವ ಗಡ್ಡಿ ಮತ್ತಿತರರು ಭಾಗವಹಿಸಿದ್ದರು.

ರಮೇಶ ಮೇಟಿ ಸೊಗಸಾಗಿ ನಿರೂಪಿಸಿದರು. ಬಸವರಾಜ ನಾಯ್ಕ ಸ್ವಾಗತಿಸಿದರು. ಎಂ. ಬಿ. ತಾಂಬೋಳಿ ವಂದಿಸಿದರು.

**ಸಮ್ಮೇಳನದಲ್ಲಿ ತೆಗೆದುಕೊಂಡ ನಿರ್ಣಯಗಳು:**

1) ಸರ್ಕಾರದಿಂದ ಜಾನಪದ, ಸಾಂಸ್ಕೃತಿಕ ನೀತಿ ರೂಪಿಸಬೇಕು. 2) ಜಾನಪದ ಕಲಾವಿದರಿಗೆ ಎರಡು ಸಾವಿರದಿಂದ ಐದು ಸಾವಿರ ರೂ. ಮಾಶಾಸನ ಹೆಚ್ಚಿಸಬೇಕು. ಮಾಶಾಸನ ಪಡೆಯಲು ವಯೋಮಿತಿ 58 ವರ್ಷದಿಂದ 50 ವರ್ಷಕ್ಕೆ ಇಳಿಸಬೇಕು.

3) ಕನ್ನಡ ಜಾನಪದ ಪರಿಷತ್ ನಡೆಸುವ ಕಾರ್ಯಕ್ರಮಗಳಿಗೆ ಸರ್ಕಾರ ಅನುದಾನ ನೀಡಬೇಕು. 4) ಶಾಲಾ ಪಠ್ಯ ಪುಸ್ತಕಗಳಲ್ಲಿ ಜಾನಪದ ಆಟ, ಪಾಠದ ಕುರಿತು ವಿಷಯ ಸೇರ್ಪಡೆ ಮಾಡಬೇಕು. 5) ಸರ್ಕಾರವೇ ಜಾನಪದ ಕಲಾವಿದರಿಗೆ ಜೀವವಿಮೆ ಮಾಡಿಸಬೇಕು ಎಂದು ಒತ್ತಾಯಿಸಿ ಬಾಗಲಕೋಟೆ ಜಿಲ್ಲಾ ಎರಡನೇ ಕನ್ನಡ ಜಾನಪದ ಸಮ್ಮೇಳನದಲ್ಲಿ ತೆಗೆದುಕೊಂಡ ಐದು ನಿರ್ಣಯಗಳನ್ನು ಸರ್ಕಾರ ಕೂಡಲೆ ಜಾರಿಗೆ ತರಬೇಕು. –ಡಿ. ಎಂ. ಸಾವಕಾರ, ಜಿಲ್ಲಾಧ್ಯಕ್ಷರು, ಕನ್ನಡ ಜಾನಪದ ಪರಿಷತ್ ಬಾಗಲಕೋಟೆ.

# ದೇಶಿ ತಳಿಗಳ ಸಂರಕ್ಷಣೆ ಮತ್ತು ಉತ್ತೇಜನ: ರೈತರ ನೋಂದಣಿಗೆ ಮೊಬೈಲ್ ಆಪ್ ಬಿಡುಗಡೆ

**ಬಾಗಲಕೋಟೆ :** ತಲೆ ತಲಾಂತರಗಳಿಂದ ದೇಸಿ ತಳಿಗಳನ್ನು ಸಂರಕ್ಷಣೆ ಮಾಡುವ ನಿಟ್ಟಿನಲ್ಲಿ ಕೃಷಿ ಮಾಡುತ್ತಿರುವ ರೈತರಿಗೆ ಉತ್ತೇಜನ ನೀಡಲು ಕೃಷಿ ಇಲಾಖೆಯು ಜಿಲ್ಲೆಯಲ್ಲಿ ದೇಸಿ ತಳಿಗಳ ಸಂರಕ್ಷಣೆ ಮತ್ತು ಉತ್ತೇಜನ ಕಾರ್ಯಕ್ರಮ ಹಮ್ಮಿಕೊಂಡಿದೆ. ರೈತರ ನೋಂದಣಿಗೆ ಮೊಬೈಲ್ ಆಪ್ ಬಿಡುಗಡೆ ಮಾಡಲಾಗಿದೆ.

ಸ್ಥಳೀಯ ತಳಿಗಳು ಅಥವಾ ಸಾಂಪ್ರದಾಯಿಕ ಕೃಷಿ ಪದ್ಧತಿಯಿಂದ ಅಭಿವೃದ್ಧಿ, ನಿರ್ವಹಿಸಲ್ಪಡುವ ತಳಿಗಳು ದೇಸಿ ತಳಿಗಳೆಂದು ಕರೆಯಲ್ಪಡುತ್ತವೆ, ಇವು ರೈತರ ಸಾಂಪ್ರದಾಯಿಕ ಮತ್ತು ಪರಂಪರೆ ಪ್ರಭೇದಗಳಾಗಿರುತ್ತವೆ. ಈ ತಳಿಗಳಲ್ಲಿರುವ ವಿಶಿಷ್ಟ ಗುಣಲಕ್ಷಣಗಳು ಮತ್ತು ಭೌಗೋಳಿಕ ಮೂಲಗಳ ಕಾರಣದಿಂದ ವೈಜ್ಞಾನಿಕವಾಗಿ ಅಭಿವೃದ್ಧಿ ಪಡಿಸಲಾದ ಅಧಿಸೂಚಿತ ಪ್ರಭೇದಗಳಿಗಿಂತ ದೇಸಿ ತಳಿಗಳು ಪೋಷಕಾಂಶಗಳಲ್ಲಿ ಸಮೃದ್ಧವಾಗಿರುತ್ತವೆ.

ದೇಸಿ ತಳಿಗಳನ್ನು ಸಂರಕ್ಷಿಸಿ ಮತ್ತು ಬೆಳೆಸುವ ಮೂಲಕ ಕೃಷಿ ಪರಂಪರೆಯನ್ನು ಮುಂದುವರೆಸುತ್ತಿರುವ ರೈತರನ್ನು ಗುರುತಿಸುವುದು ಮತ್ತು ಉತ್ತೇಜಿಸುವುದನ್ನು ಮನಗಂಡು ಕೃಷಿ ಇಲಾಖೆಯು ದೇಸಿ ತಳಿಗಳ ನಿರಂತರ ಕೃಷಿಯನ್ನು ಪ್ರೋತ್ಸಾಹಿಸಲು, ಜೀವ ವೈವಿಧ್ಯತೆಯನ್ನು ಬೆಂಬಲಿಸಲು ಹಾಗೂ ಸುಸ್ಥಿರ ಕೃಷಿ ಪದ್ಧತಿಯನ್ನು ಪೋಷಿಸಲು ಈ ಉತ್ತೇಜನ ಕಾರ್ಯಕ್ರಮವನ್ನು ಅನುಷ್ಠಾನ ಮಾಡಲಾಗಿರುತ್ತದೆ. ಕಣ್ಮರೆಯಾಗುತ್ತಿರುವ ತಳಿಗಳನ್ನು ಸಂರಕ್ಷಿಸುವ ಜೊತೆಗೆ ಆಯಾ ಸ್ಥಳೀಯ ಪ್ರದೇಶಕ್ಕೆ ಸೂಕ್ತವಾದ ದೇಸಿ ತಳಿಗಳ ಗುರುತಿಸುವಿಕೆ ಹಾಗೂ ಸಂರಕ್ಷಣೆಯ ಗುರಿಯನ್ನು ಹೊಂದಲಾಗಿದೆ. ದೇಸಿ ತಳಿಗಳನ್ನು ಹಿಂದಿನಿಂದಲೂ ಸಂರಕ್ಷಿಸಿ ಕೃಷಿ ಮಾಡುತ್ತಿರುವ ರೈತರಿಗೆ ಬೆಂಬಲ ನೀಡುವ ಜೊತೆಗೆ ದೇಸಿ ತಳಿಗಳ ಜನಪ್ರಿಯತೆಗೆ ಬೆಂಬಲ ನೀಡುವ ಸಂಕಲ್ಪ ಮಾಡಲಾಗಿದೆ.

ಕೃಷಿ ಇಲಾಖೆಯ ವತಿಯಿಂದ ದೇಸಿ ತಳಿ ಸಂರಕ್ಷಿಸುತ್ತಿರುವ ರೈತರನ್ನು ಗುರುತಿಸಲು ಮತ್ತು ಅಂತಹ ರೈತರ ನೋಂದಣಿಗಾಗಿ ಮೊಬೈಲ್ ಆಪ್ ಬಿಡುಗಡೆ ಮಾಡಿದ್ದು, ಈಗಾಗಲೆ ಕೃಷಿ ಇಲಾಖೆಯ ಸಿಬ್ಬಂದಿಗಳು ರೈತರ ನೋಂದಣಿಯನ್ನು ಪ್ರಾರಂಭಿಸಿರುತ್ತಾರೆ. ಕೃಷಿ ಇಲಾಖೆಯ ನೂತನ ಯೋಜನೆಯ ಲಾಭ ಪಡೆಯಲು ರೈತರು, ತಮ್ಮ ಸಮೀಪದ ಕೃಷಿ ಇಲಾಖೆಯ ಕಛೇರಿಗೆ ಭೇಟಿ ನೀಡುವಂತೆ ಜಂಟಿ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ಕೋರಿದ್ದಾರೆ.

# ಮೆಟ್ರಿಕ್ ನಂತರದ ಹಾಸ್ಟೆಲ್ ಪ್ರವೇಶಕ್ಕೆ ಅರ್ಜಿ ಆಹ್ವಾನ

**ಬಾಗಲಕೋಟೆ :** ಪ್ರಸಕ್ತ ಸಾಲಿನ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಮೆಟ್ರಿಕ್ ನಂತರ ಬಾಲಕರ, ಬಾಲಕಿಯರ ವಸತಿ ನಿಲಯಗಳಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ಜೂನ್.20 ಕೊನೆಯ ದಿನವಾಗಿದ್ದು, ವಿದ್ಯಾರ್ಥಿಗಳು ಅಗತ್ಯ ದಾಖಲೆಗಳೊಂದಿಗೆ https://shp.karnataka.gov.in/bcwd ಸಂಪರ್ಕಿಸಿ ಅರ್ಜಿ ಸಲ್ಲಿಸಿ ನಂತರ,
ಆನ್‌ಲೈನ್ ಸ್ವೀಕೃತಿ ಪ್ರತಿ ಹಾಗೂ ಅಗತ್ಯ ದಾಖಲೆಗಳನ್ನು ದೃಢಿಕರಿಸಿ ತಾಲೂಕು
ಕಛೇರಿಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಇಲಾಖೆಯ ಅಧಿಕೃತ ಜಾಲತಾಣ https://bcwd.karnataka.gov.in/, ಅಥವಾ ತಾಲ್ಲೂಕು ಅಥವಾ ಜಿಲ್ಲಾ ಕಛೇರಿಗೆ ಭೇಟಿ ನೀಡುವುದು ಮತ್ತು ತಾಂತ್ರಿಕ ತೊಂದರೆಗಳಾದ್ದಲ್ಲಿ bcwdhelpline@gmail.com ಇ–ಮೇಲ್ ಮೂಲಕ ಸಂಪರ್ಕಿಸಲು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕಡಿತ ಚಿಕ್ಕದು ಅಪಾಯ ದೊಡ್ಡದು ಸ್ವಯಂ ರಕ್ಷಣಾಕ್ರಮಗಳ ಪಾಲಿಸಿ ಡೆಂಗ್ಯೂ ರೋಗ ತಡೆಯಿರಿ: ಅಂಗಡಿ



**ಬೆನಕಟ್ಟಿ :** ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಬಾಗಲಕೋಟ, ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣ ಅಧಿಕಾರಿಗಳು ಬಾಗಲಕೋಟ, ಪ್ರಾಥಮಿಕ ಆರೋಗ್ಯ ಕೇಂದ್ರ ಶಿರೂರ ಹಾಗೂ ಮೇಲ್ರೊ ಸುಗರ್ ಪ್ಯಾಕ್ಟರಿ ಸಹಯೋಗದಲ್ಲಿ "ಡೆಂಗ್ಯೂ ಚಿಕೂನ್ ಗುನ್ಯಾ ರೋಗ ತಡೆ ಮುಂಜಾಗ್ರತೆ ಆರೋಗ್ಯ ಅರಿವು ಜಾಗೃತಿ ಆಯೋಜಿಸಲಾಗಿತ್ತು.

ಪ್ರಾಸ್ತಾವಿಕವಾಗಿ ಆರೋಗ್ಯ ನಿರೀಕ್ಷಣಾಧಿಕಾರಿ ಎಸ್ ಎಸ್ ಅಂಗಡಿಯವರು, ಡೆಂಗ್ಯೂ, ಚಿಕೂನ್ ಗುನ್ಯಾ ರೋಗ ಸೋಲಿಸಲು ನೀರಿನ ಸಂಗ್ರಹಗಳ ಪರೀಶೀಲನೆ, ಸ್ವಚ್ಛಗೊಳಿಸುವುದು, ಮುಚ್ಚಿಡಿವುದು ಎಂಬ ಘೋಷವಾಕ್ಯಯೊಂದಿಗೆ, ಸೊಳ್ಳೆಗಳ ಕಚ್ಚುವಿಕೆಯಿಂದ ಮಲೇರಿಯಾ, ಡೆಂಗ್ಯೂ, ಚಿಕೂನ್ ಗುನ್ಯಾ, ಮೆದಳು ಜ್ವರ, ಆನೆಕಾಲುರೋಗಗಳು ಒಬ್ಬರಿಂದ ಒಬ್ಬರಿಗೆ ಹರಡುವವು,

ಡೆಂಗ್ಯೂ ಚಿಕೂನ್ ಗುನ್ಯಾ ರೋಗವು "ಈಡಿಸ್ ಈಜಿಪ್ತೆ" ಸೊಳ್ಳೆಗಳು ಸಂಗ್ರಹಿಸಿದ ಸ್ವಚ್ಛವಾದ ನೀರಿನಲ್ಲಿ ಲಾರ್ವಾ ಉತ್ಪತ್ತಿಯಾಗಿ ಸೊಳ್ಳೆಗಳು ಹಗಲಿನಲ್ಲಿ ಕಚ್ಚುವದು, ಮನೆ ಸುತ್ತ ಮುತ್ತ ಟೆಂಗಿನ ಚಿಪ್ಪು, ಒಡೆದ ಬಾಟಲ್, ಟಾಯರ್ ಟ್ಯೂಬ್, ಕೂಲರ್ ಫ್ರೀಜ್ ನೀರಿನ ಸಂಗ್ರಹ ಸ್ವಚ್ಛಗೊಳಿಸಿ, ಲಾರ್ವಾ ಉತ್ಪತ್ತಿ ತಡೆಯಬೇಕು, ನೀರಿನ ಸಂಗ್ರಹಗಳ ಮೇಲೆ ತಪ್ಪದೇ ಮುಚ್ಚಳಿಕೆ ಹಾಕಬೇಕು. ನಿಶಕ್ತಿ ವಿಪರೀತ ಜ್ವರ, ತಲೆನೋವು, ಯಾವುದೇ ತರಹ ಜ್ವರ ಕಾಣಿಸಿದರೆ ನಿರ್ಲಕ್ಷ ಬೇಡ ಹತ್ತಿರದ ಸರಕಾರಿ ಆಸ್ಪತ್ರೆ ಬೇಟಿನೀಡಿ ಸೂಕ್ತ ಚಿಕಿತ್ಸೆ ಸಲಹೆ ಪಡೆಯಬೇಕು, ಹೊರರಾಜ್ಯಗಳಿಂದ ಬಂದ ಕಾರ್ಮಿಕರಿಗೆ ಆರೋಗ್ಯ ಸಮಸ್ಯೆಗಳಿದ್ದವರ ಸಂಶಯುತ ಮಲೇರಿಯಾ ರಕ್ತಲೇಪನ ಸಂಗ್ರಹಿಸಲಾಯಿತು.

ಡೆಂಗ್ಯೂ ಜಾಗೃತಿ ಆರೋಗ್ಯ ಅರಿವು ಕಾರ್ಯಕ್ರಮದಲ್ಲಿ ಆರೋಗ್ಯ ಇಲಾಖೆಯ ವಿವಿಧ ಹಂತದ ಅಧಿಕಾರಿಗಳು, ಮೆಲ್ರೊಸುಗರ್ ಫ್ಯಾಕ್ಟರಿಯ ಸಹ ವ್ಯವಸ್ಥಾಕರಾದ ಮುತ್ತುರಾಜ ಗುಳೇದಗುಡ್ಡ, ಸ್ಯಾನಿಟರಿ ಇನ್ಸ್ಪೆಕ್ಟರ್ ವಿವೇಕಾನಂದ ಗದಗಿಮಠ, ದ್ಯಾಮಣ್ಣ ಶಿ ತಳಕೇರಿ, ಶೇಖರ್ ಹನುಮಾರ್ ಶ್ರೀನಿವಾಸ್ ಪಿ ಎಡಕೆ, ಜಿ ಎಸ್ ಗಣಾಚಾರಿ, ಎ ಬಿ ಮೇಲಗಿರಿ, ಎಮ್ ಎ ನದಾಫ್, ಪ್ರದೀಪ ಬಾತಮರೆ, ರಾಜು ಬಾಸಿಂಗೆ, ಮಾಯಪ್ಪ ಯಲ್ಲೂರಕರ, ಆಶಾ ಕಾರ್ಯಕರ್ತೆಯರು, ಕಾರ್ಮಿಕರು ಭಾಗವಹಿಸಿದ್ದರು.

# ಸಂಯುಕ್ತ ರಸಗೊಬ್ಬರಗಳ ಬಳಕೆಗೆ ಕೃಷಿ ಇಲಾಖೆ ಸಲಹೆ

**ಬಾಗಲಕೋಟೆ :** ಪ್ರಧಾನ ಪೋಷಕಾಂಶಗಳು ಹಾಗೂ ಲಘು ಪೋಷಕಾಂಶಗಳಿಗೆ ಭೂಮಿಯೆ ಮುಖ್ಯ ಆಧಾರ. ಮಣ್ಣಿನಿಂದ ಈ ಎಲ್ಲ ಪೋಷಕಾಂಶಗಳನ್ನು ಬೆಳೆಗೆ ಬೇಕಾದ ಪ್ರಮಾಣದಲ್ಲಿ ಮುಖ್ಯವಾಗಿ ರಸಗೊಬ್ಬರ ಮುಖೇನ ನೀಡಲಾಗುತ್ತಿದ್ದು, ರೈತರು ಕೇವಲ ಒಂದು ಅಥವಾ ಎರಡು ಪೋಷಕಾಂಶ ಒದಗಿಸುವ ಯೂರಿಯಾ ಹಾಗೂ ಡಿ.ಎ.ಪಿ ಯನ್ನು ಬಳಸುತ್ತಿದ್ದು ಇವುಗಳಲ್ಲಿ ಸಾರಜನಕ ಮತ್ತು ರಂಜಕದ ಅಂಶಗಳು ಮಾತ್ರ ಇರುತ್ತವೆ. ಆದರೆ ಬೆಳೆಗಳಿಗೆ ಬರ ಮತ್ತು ರೋಗನಿರೋಧಕ ಶಕ್ತಿ ನೀಡಿ ಕಾಳಿನ ತೂಕ ಹೆಚ್ಚಿಸಲು ಅತ್ಯಂತ ಅವಶ್ಯವಾಗಿರುವ ಪೊಟ್ಯಾಶ ಲಭ್ಯವಿರುವುದಿಲ್ಲ. ರೈತರಲ್ಲಿ ಸಮತೋಲನಾತ್ಮಕ ರಸಗೊಬ್ಬರ ಬಳಕೆಯನ್ನು ಉತ್ತೇಜಿಸಲು ಪೊಟ್ಯಾಶ್‌ಯುಕ್ತ ಕಾಂಪ್ಲೆಕ್ಸ ರಸಗೊಬ್ಬರಗಳ ಬಳಕೆಯನ್ನು ಮಾಡುವಂತೆ ಜಂಟಿ ಕೃಷಿ ನಿರ್ದೇಶಕರು ತಿಳಿಸಿದ್ದಾರೆ.

ರೈತರು ರಸಗೊಬ್ಬರವನ್ನು ಕೇವಲ ಒಂದೇ ಸಂಸ್ಥೆಯ ಅಥವಾ ಒಂದೇ ರಸಗೊಬ್ಬರಕ್ಕೆ ಆದ್ಯತೆ ನೀಡದೆ, ಡಿ.ಎ.ಪಿ ರಸಗೊಬ್ಬರಕ್ಕೆ ಪರ್ಯಾಯವಾಗಿ ಗಂಧಕ ಒದಗಿಸುವ 20:20:0:13 ಹಾಗೂ ಪೋಟ್ಯಾಶ ಒದಗಿಸುವ ಇತರೆ ಸಂಯುಕ್ತ ಗೊಬ್ಬರಗಳಾದ 15:15:15, 10:26:26, 12:32:16, 14:35:14, 17:17:17, 14:28:14, 19,19,19, 9:24:24, 8:21:21 ಮತ್ತು 24:24:0:08 ಇತ್ಯಾದಿ ಕಾಂಪ್ಲೆಕ್ಸ ರಸಗೊಬ್ಬರಗಳನ್ನು ಸಹ ಬಳಸಬಹುದಾಗಿದೆ. ಅಲ್ಲದೆ ರೈತರು ರಸಗೊಬ್ಬರವನ್ನು ಕೇವಲ ಒಂದೆ ಸಂಸ್ಥೆಯ ಅಥವಾ ಒಂದೆ ರಸಗೊಬ್ಬರಕ್ಕೆ ಆದ್ಯತೆ ನೀಡದೆ, ಡಿ.ಎ.ಪಿ ರಸಗೊಬ್ಬರಕ್ಕೆ ಪರ್ಯಾಯವಾಗಿ ಗಂಧಕ ಒದಗಿಸುವ 20:20:0:13 ಹಾಗೂ ಪೊಟ್ಯಾಶ ಒದಗಿಸುವ ಇತರೆ ಸಂಯುಕ್ತ ರಸಗೊಬ್ಬರಗಳನ್ನು ಬಳಸಲು ರೈತ ಬಾಂಧವರಲ್ಲಿ ಕೋರಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಹತ್ತಿರದ ಕೃಷಿ ಇಲಾಖೆಯ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.

# ಕಾಂಗ್ರೆಸ್ ಕಚೇರಿಯಲ್ಲಿ ರಾಜೀವ ಗಾಂಧಿ ಪುಣ್ಯ ಸ್ಮರಣೋತ್ಸವ




**ಧಡಲ್ ಬಾಜಿ ಸಮಾಚಾರ**

**ರಬಕವಿ–ಬನಹಟ್ಟಿ :** ಆಧುನಿಕ ನವ ಭಾರತದ ನಿರ್ಮಾಣದಲ್ಲಿ ರಾಜೀವ ಗಾಂಧಿ ಅವರ ಕೊಡುಗೆ ಅಪಾರವಾಗಿದೆ ಎಂದು ಕಾಂಗ್ರೆಸ್ ಮುಖಂಡ ಭೀಮಸಿ ಮಗದುಮ ಹೇಳಿದರು. ಅವರು ಬನಹಟ್ಟಿಯ ಕಾಂಗ್ರೆಸ್ ಕಾರ್ಯಾಲಯದಲ್ಲಿ ಹಮ್ಮಿಕೊಂಡ ರಾಜೀವ ಗಾಂಧಿ ಪುಣ್ಯ ಸ್ಮರಣೋತ್ಸವ ಕಾರ್ಯಕ್ರಮದಲ್ಲಿ ಅವರ ಭಾವ ಚಿತ್ರಕ್ಕೆ ಪೂಜೆ ಸಲ್ಲಿಸಿ ಮಾತನಾಡಿದರು. ದೇಶದಲ್ಲಿ ಐಟಿ ಉದ್ಯಮ, ದೂರಸಂಪರ್ಕ ಕ್ರಾಂತಿ ಮಾಡಿದ ಖ್ಯಾತಿ ರಾಜೀವ ಗಾಂಧಿಯವರಿಗೆ ಸಲ್ಲುತ್ತದೆ. ಗ್ರಾಮೀಣ ಭಾರತದ ಸಮಗ್ರ ಅಭಿವೃದ್ಧಿ ದೃಷ್ಠಿಯಲ್ಲಿಟ್ಟುಕೊಂಡ ಅವರ ಯೋಜನೆಗಳು ಇಂದಿಗೂ ಪ್ರಸ್ತುತವಾಗಿವೆ. ಅವರ ಆಡಳಿತ ಶೈಲಿ, ಬಡವರ ಪರ ಕಾಳಜಿ ನಮಗೆಲ್ಲ ಮಾರ್ಗದರ್ಶನವಾಗಿವೆ ಎಂದರು.

ರಬಕವಿ–ಬನಹಟ್ಟಿ, ಮಹಾಲಿಂಗಪೂರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಲ್ಲಪ್ಪ ಸಿಂಗಾಡಿ ಹಾಗೂ ತೇರದಾಳ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಲಕ್ಷ್ಮಣ ದೇಸಾರಟ್ಟಿ ಮಾತನಾಡಿ, ದೇಶದಲ್ಲಿ ಪಂಚಾಯತ್ ರಾಜ್ಯ ವ್ಯವಸ್ಥೆ ಬಲವರ್ಧನೆ, 18 ವಯಸ್ಸಿನ ಯುವಕ ಯುವತಿಯರಿಗೆ ಮತದಾನದ ಹಕ್ಕು, ನವೋದಯ ಶಾಲೆಗಳ ನಿರ್ಮಾಣ, ಕಂಪ್ಯೂಟರಿಕರಣ, ಟೆಲಿಕಮ್ಯೂನಿಕೇಷನ್ನಲ್ಲಿ ಕ್ರಾಂತಿ ಮಾಡಿದ್ದರು. ಅವರ ಕೊಡುಗೆಯನ್ನು ಯುವ ಜನತೆ ಇಂದಿಗೂ ನೆನೆಯುತ್ತಾರೆ ಎಂದರು. ಈ ಸಂದರ್ಭದಲ್ಲಿ ಕಾಂಗ್ರೆಸ್ಸಿನ ಯುವ ಧುರೀಣ ರಾಜೇಂದ್ರ ಭದ್ರನ್ನವರ, ಶೇಖರ ಹಕ್ಕಲದಡ್ಡಿ, ರವೀಂದ್ರ ಬಾಡಗಿ, ಹೇಮಲತಾ ಪಟ್ಟಣ, ವಿದ್ಯಾ ಬಿಳ್ಳೂರ, ಆಯೇಶಾ ಫಣಿಬಂದ, ಬಸವರಾಜ ಶಿರೋಳ, ನಾಗಪ್ಪ ಪಾಟೀಲ, ದೇವೇಂದ್ರ ಮಹಿಷವಾಡಗಿ, ಬಸಯ್ಯ ಉಳವಿಮಠ ಸೇರಿದಂತೆ ಇನ್ನೂ ಅನೇಕರು ಉಪಸ್ಥಿತರಿದ್ದರು.

# ಆದರ್ಶ ಮಹಾವಿದ್ಯಾಲಯಕ್ಕೆ ಆಯ್ಕೆ



**ಲೋಕಾಪುರ :** ಪಟ್ಟಣದ ವಿದ್ಯಾಚೇತನ ಹಿರಿಯ ಪ್ರಾಥಮಿಕ ಶಾಲೆ ಜಾಡರ ಅರರಳಿಕಟ್ಟಿ. ಲೋಕಾಪೂರ ಶಾಲೆಯ 24 ವಿದ್ಯಾರ್ಥಿಗಳು ಆದರ್ಶ ಮಹಾವಿದ್ಯಾಲಯಕ್ಕೆ ಆಯ್ಕೆಯಾಗಿದ್ದಾರೆ ಎಂದು ಮುಖ್ಯಗುರುಗಳಾದ ವಿವೇಕ ಮರಾಠಿ ತಿಳಿಸಿದ್ದಾರೆ.

ಶ್ರೀನಿಧಿ ಪಾಟೀಲ, ಪ್ರಥಮ ತುಳಸೀಗೇರಿ, ಸಮೃದ್ಧಿ ಪಾಟೀಲ, ಖುಷಿ ಕೋಲಕಾರ, ಆಯಿಶಾ ಮಹಾಲಿಂಗಪೂರ, ವೈಷ್ಣವಿ ನಾಯಕ, ಸಿಂಚನಾ ತಿಪ್ಪಿಮನಿ, ರಾಕೇಶ ಪಾಟೀಲ, ಅನುಷಾ ಪರಪ್ಪನವರ, ತನುಜ ಯರಝರ್ವಿ, ತನುಜಾ ಪಾಟೀಲ, ಪ್ರೀತಮ ಕಟ್ಟಿಕಾರ, ಶ್ರೀನಿವಾಸ ಬಡಿಗೇರ, ಶ್ರಾವ್ಯ ಅರೇನಾಡ, ಮೊಹಮ್ಮದಜಾದ ಯಡಹಳ್ಳಿ, ವಿಶಾಲು ನಾಯ್ಕರ, ಲಕ್ಷ್ಮಣ ಮುದಕವಿ, ಸಮರ್ಥ ಗೋನಾಳ, ಸುಬ್ರಮಣ್ಯ ಕಲಶೆಟ್ಟಿ, ದೀಕ್ಷಾ ಹಳ್ಳಿ, ಆರಾಧ್ಯ ಕಾತರಕಿ, ಖುಷಿ ಸೋರಗಾವಿ, ವಿಜಲಕ್ಷ್ಮೀ ಶೆಟ್ಟಿಗೋಳ, ಭೂಮಿಕಾ ತಳವಾರ, ಆಯ್ಕೆ ಯಾಗಿದ್ದಾರೆ.

ಆಯ್ಕೆಯಾದ ವಿದ್ಯಾರ್ಥಿಗಳಿಗೆ ಸಂಸ್ಥೆ ಸಂಸ್ಥಾಪಕರಾದ ಎಸ್.ಎಮ್.ರಾಮದುರ್ಗ, ಶಿಕ್ಷಕರಾದ ಬಿ.ಬಿ.ಹಾದಿಮನಿ. ಚಿದಾನಂದ ಮುಂಡಾಸದ, ಗಂಗಾ ಸಕ್ರಿ, ಎಮ್.ಬಿ.ಮುಜಾವರ, ಗೀತಾ ಪಾಟೀಲ, ಸರಸ್ವತಿ ಮಾದರ, ಯಶೋಧಾ ಮರಾಠಿ. ಗೀತಾ ನಾಯಕ, ಶಿಲ್ಪಾ ಗೌಡ, ಸರಸ್ವತಿ ದೇಸಾಯಿ, ರಾಜೇಶ್ವರಿ ಗಂಗಣ್ಣವರ, ಗಂಗಾ ಸಗರಿ, ಪಲ್ಲವಿ ಗೌಡ, ಸುರೇಶ ಮರಾಠೀ. ವೆಂಕಟ್ರಮಣ ಗೌಡ, ಉಮಾ ದೊಡ್ಡನ್ನವರ, ಮಂಜುಳಾ ಕಾಜಗಾಖು, ಮಧೂ ತೆಗ್ಗಿ, ಪಲ್ಲವಿ ಗೌಡ, ಅಕ್ಷತಾ ಪಾಟೀಲ ಅಭಿನಂದಿಸಿದ್ದಾರೆ.

# ಜೇನು ಹುಳ ಉಳಿಸಿ–ಮಾನವಕುಲ ರಕ್ಷಿಸಿ: ಡಾ. ವೆಂಕಟೇಶಲು

**ಬಾಗಲಕೋಟ :** ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ (ತೋ.ವಿ.ವಿ.), ಬಾಗಲಕೋಟ, ಅಃಃಔ, ವಿಸ್ತರಣಾ ನಿರ್ದೇಶನಾಲಯ ಹಾಗೂ ಮಕರಂದ ಜೇನು ಕೃಷಿ ರೈತ ಉತ್ಪಾದಕರ ಕಂಪನಿ, ಬಾಗಲಕೋಟ ಇವರ ಸಂಯುಕ್ತ ಆಶ್ರಯದಲ್ಲಿ 'ವಿಶ್ವ ಜೇನು ದಿನ – 2025' ಹಾಗೂ ವೈಜ್ಞಾನಿಕ ಜೇನು ಸಾಕಾಣಿಕೆ ಕುರಿತ ತರಬೇತಿ ಕಾರ್ಯಕ್ರಮವನ್ನು ಮೇ 20ರಂದು ಇಂಜಿನವಾರಿ ಗ್ರಾಮದ ಖ್ಯಾತ ಜೇನು ಕೃಷಿಕ ತಿಪ್ಪಣ್ಣ ಗೌಡರ ತೋಟದಲ್ಲಿ ಆಯೋಜಿಸಲಾಯಿತು. ಕಾರ್ಯಕ್ರಮವನ್ನು ತೋ.ವಿ.ವಿ. ಬಾಗಲಕೋಟೆಯ ವಿಸ್ತರಣಾ ನಿರ್ದೇಶಕರಾದ ಡಾ. ವೆಂಕಟೇಶಲು ಜೇನು ಪೆಟ್ಟಿಗೆ ಅನಾವರಣ ಹಾಗೂ ಮಕರಂದ ಎಫ್.ಇ.ಓ. ಬಾಗಲಕೋಟೆಯ ವ್ಯವಹಾರ ಕೇಂದ್ರ–2ರ ಉದ್ಘಾಟನೆಯ ಮೂಲಕ ಉದ್ಘಾಟಿಸಿದರು. ಅವರು ಮಾತನಾಡುತ್ತಾ, "ಜೇನು ಹುಳ ಉಳಿಸುವುದು ಮಾನವಕುಲದ ಉಳಿವಿಗೆ ಅಗತ್ಯ. ರೈತರ ಆದಾಯ ದ್ವಿಗುಣಗೊಳಿಸಲು ಜೇನು ಕೃಷಿ ಅಳವಡಿಸಿಕೊಳ್ಳುವುದು ಸೂಕ್ತ. ಜೇನು ಕೃಷಿಗೆ ಬೇಕಾದ ವೈಜ್ಞಾನಿಕ ಸಲಹೆಗಳನ್ನು ತೋ.ವಿ.ವಿ. ವಿಜ್ಞಾನಿಗಳಿಂದ ಪಡೆದುಕೊಳ್ಳಬೇಕು," ಎಂದು ಸಲಹೆ ನೀಡಿದರು.




ಸಿಬಿಬಿಓ ನೋಡಲ್ ಅಧಿಕಾರಿ ಶ್ರೀ ಶ್ರೀಪಾದ ವಿಶ್ವೇಶ್ವರ ಅವರು ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಯಲ್ಲಿ ಮಾತನಾಡಿ, "ಕರ್ನಾಟಕದಲ್ಲಿ ಕೇವಲ ಮೂರು ಜೇನು ಕೃಷಿ ರೈತ ಉತ್ಪಾದಕರ ಸಂಸ್ಥೆಗಳಿಗೆ ಅನುಮತಿ ನೀಡಲಾಗಿದ್ದು, ಬಾಗಲಕೋಟ ಜಿಲ್ಲೆಗೆ ಆಯ್ಕೆ ದೊರೆತಿರುವುದು ಹೆಮ್ಮೆಪಡುವ ಸಂಗತಿ," ಎಂದು ಹೇಳಿದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ ತೋ.ವಿ.ವಿ. ಬಾಗಲಕೋಟೆಯ ಕೀಟ ಶಾಸ್ತ್ರಜ್ಞ ಡಾ. ರಾಮನಗೌಡ ಎಚ್. ಅವರು ವೈಜ್ಞಾನಿಕ ಜೇನು ಸಾಕಾಣಿಕೆ ಕುರಿತು ಮಾಹಿತಿಪೂರಿತ ತರಬೇತಿಯನ್ನು ನೀಡಿದರು.

ಮಕರಂದ ಎಫ್.ಇ.ಓ. ಅಧ್ಯಕ್ಷರಾದ ವೀರಯ್ಯ ಸೂಳಿಕೇರಿ ಮಾತನಾಡುತ್ತಾ, "ಜೇನು ಹುಳಗಳ ಮೂಲಕ ಬೆಳೆಗಳಲ್ಲಿ ಶೇಕಡಾ 25 ರಿಂದ 40 ರಷ್ಟು ಇಳುವರಿ ಹೆಚ್ಚಳ ಸಾಧ್ಯ," ಎಂದು ತಿಳಿಸಿದರು.

ಮಕರಂದ ಎಫ್.ಇ.ಓ. ನಿರ್ದೇಶಕಿ ಶ್ರೀಮತಿ ಪುಷ್ಪಾ ಅಂಗಡಿ ಮಾತನಾಡಿ, "ತೋ.ವಿ.ವಿ. ಮಾರ್ಗದರ್ಶನದಲ್ಲಿ ನಾನು 20 ಜೇನು ಪೆಟ್ಟಿಗೆಗಳನ್ನು ಸಂರಕ್ಷಿಸಿ ಉತ್ತಮ ಜೇನು ಉತ್ಪಾದನೆ ಮಾಡುತ್ತಿದ್ದೇನೆ. ರೈತರು ಜೇನು ಕೃಷಿಗೆ ಮುಂದಾಗಿ ಆರೋಗ್ಯ ಹಾಗೂ ಲಾಭ ಎರಡನ್ನೂ ಗಳಿಸಬಹುದು," ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ತೋ.ವಿ.ವಿ. ಬಾಗಲಕೋಟೆಯ ಕೀಟ ಶಾಸ್ತ್ರಜ್ಞ ಡಾ. ಸತ್ಯನಾರಾಯಣ ಸಿ., ಇಂಜಿನವಾರಿ ಗ್ರಾಮ ಪಂಚಾಯತಿಯ ಮಾಜಿ ಉಪಾಧ್ಯಕ್ಷ ಬಸನಗೌಡ ಗೌಡರ ಉಪಸ್ಥಿತರಿದ್ದರು.

ಮಕರಂದ ಎಫ್.ಓ.ಪಿ. ನಿರ್ದೇಶಕರಾದ ಶ್ರೀ ತಿಪ್ಪಣ್ಣ ಗೌಡರ ಅವರು ಎಲ್ಲ ಅತಿಥಿಗಳನ್ನು ಆತ್ಮೀಯವಾಗಿ ಸ್ವಾಗತಿಸಿದರು.

ಸಿಬಿಬಿಓ ಫೆಸಿಲಿಟೇಟರ್ ಕು. ಪ್ರತೀಕ್ಷಾ ಸಿ.ಟಿ. ಧನ್ಯವಾದ ಸಲ್ಲಿಸಿದರು.

ಪಿಓಪಿ ಸೆಂಟರ್ ಫೆಸಿಲಿಟೇಟರ್ ಶ್ರೀಮತಿ ಪೂರ್ಣಿಮಾ ಕೊಪ್ಪದ ಕಾರ್ಯಕ್ರಮ ನಿರೂಪಿಸಿದರು.

ಕಾರ್ಯಕ್ರಮದಲ್ಲಿ ವಿಸ್ತರಣಾ ನಿರ್ದೇಶನಾಲಯದ ಸಿಬ್ಬಂದಿ, ಮಕರಂದ ಸಂಸ್ಥೆಯ ನಿರ್ದೇಶಕರು ಹಾಗೂ ಹಲವಾರು ರೈತರು ಪಾಲ್ಗೊಂಡಿದ್ದರು.

# ಬಸವ ನೆಲದ ಜನಾಶಯದಂತೆ ನಡೆದಿದ್ದೇನೆ: ಸಚಿವ ಶಿವಾನಂದ

**ಕೊಲ್ಹಾರ :** ತಿಕೋಟಾ ಕ್ಷೇತ್ರದಿಂದ ಪಕ್ಷ–ಕ್ಷೇತ್ರ ಬದಲಿಸಿ ಇಲ್ಲಿಗೆ ಬಂದ ನನ್ನನ್ನು ಬಸವನಬಾಗೇವಾಡಿ ಕ್ಷೇತ್ರದ ಜನರು ಅಭಿಮಾನ, ಪ್ರೀತಿಯಿಂದ ಗೆಲ್ಲಿಸಿದರು. ಕ್ಷೇತ್ರದ ಜನಾಶಯಕ್ಕೆ ತಕ್ಕಂತೆ ನಾನು ಕೊಲ್ಹಾರ, ನಿಡಗುಂದಿ ಸೇರಿದಂತೆ ಇಡೀ ಬಸವನ ಬಾಗೇವಾಡಿ ಕ್ಷೇತ್ರದ ಅಭಿವೃದ್ಧಿ ಮಾಡಿದರೂ ಪ್ರಚಾರ ಪಡೆಯಲಿಲ್ಲ ಎಂದು ಜವಳಿ, ಕೃಷಿ ಮಾರುಕಟ್ಟೆ, ಸಕ್ಕರೆ ಹಾಗೂ ಕಬ್ಬು ಅಭಿವೃದ್ಧಿ ಸಚಿವರಾದ ಶಿವಾನಂದ ಪಾಟೀಲ ಹೇಳಿದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಅವರು ಮೇ 23 ರಂದು ಕೊಲ್ಹಾರ ಪಟ್ಟಣಕ್ಕೆ ಆಗಮಿಸಿ ವಿವಿಧ ಅಭಿವೃದ್ಧಿ ಯೋಜನೆಗಳ ಲೋಕಾರ್ಪಣೆಮಾಡಲಿರುವಹಿನ್ನೆಲೆಯಲ್ಲಿ ಮಂಗಳವಾರ ರಾತ್ರಿ ಕೊಲ್ಹಾರ ಪಟ್ಟಣದ ಸಮುದಾಯಭವನದಲ್ಲಿಜರುಗಿದಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ನಾನು ಬಸವನಬಾಗೇವಾಡಿ ಕ್ಷೇತ್ರದಿಂದ ಗೆದ್ದು ಕೊಲ್ಹಾರ ಪಟ್ಟಣಕ್ಕೆ ಬಂದಾಗ ಕೃಷ್ಣಾ ನದಿಯಲ್ಲಿ ಕೇವಲ 13 ಕಂಬ ನಿಂತಿದ್ದವು. ಇದನ್ನರಿತ ನಾನು ರಾಜಕೀಯ ಇಚ್ಛಾಶಕ್ತಿ ಹಾಗೂ ಅಭಿವೃದ್ಧಿ ವಿಷಯದಲ್ಲಿನ ಬದ್ಧತೆಯಿಂದ ತ್ವರಿತವಾಗಿ ಸೇತುವೆ ನಿರ್ಮಿಸಿ, ಬಾಗಲಕೋಟೆ, ವಿಜಯಪುರ ಭಾಗದ ಮೂಲಕ ಉತ್ತರ–ದಕ್ಷಿಣ ಭಾಗಕ್ಕೆ ಸಂಪರ್ಕ ಕಲ್ಪಿಸುವ ಕೆಲಸ ಮಾಡಿದೆ ಎಂದು ಹಳೆಯ ಸಂಗತಿಗಳನ್ನು ಮೆಲುಕು ಹಾಕಿದರು.



ಒಂದೊಮ್ಮೆಅಂದುಸೇತುವೆನಿರ್ಮಿಸದಿದ್ದರೆ ಕೊಲ್ಹಾರ ಪಟ್ಟಣ ಸಂಪರ್ಕ ಕಳೆದುಕೊಂಡು ನಡುಗಡ್ಡೆ ಆಗಿರುತ್ತಿತ್ತು. ಕೊಲ್ಹಾರದಲ್ಲಿ ಮೊಸರು, ಮೀನು ಯಾವುದೂ ಸಿಗದ ಸ್ಥಿತಿ ಇರುತ್ತಿತ್ತು, ಅಭಿವೃದ್ಧಿ ಕಾಣದೇ ತಾಲೂಕ ಕೂಡ ಆಗುತ್ತಿರಲಿಲ್ಲ ಎಂದು ತಾವು ಮಾಡಿದ ಅಭಿವೃದ್ಧಿ ಪರ ರಾಜಕೀಯ ಬದ್ಧತೆ ವಿವರಿಸಿದರು.

ಕ್ಷೇತ್ರದ ಅಭಿವೃದ್ಧಿ ವಿಷಯದಲ್ಲಿ ನಾನು ಪಕ್ಷ, ಊರು, ಜಾತಿ ಅಂತೆಲ್ಲ ನೋಡದೇ ಸಂಕಷ್ಟದಲ್ಲಿದ್ದ ಈ ಭಾಗದ ಜನಾಶಯದಂತೆ ಅಭಿವೃದ್ಧಿಗೆ ಆದ್ಯತೆ ನೀಡಿದೆ. ಇಷ್ಟೆಲ್ಲ ಅಭಿವೃದ್ಧಿ ಮಾಡಿದರೂ ನನ್ನನ್ನೂ ನೀವು ಸೋಲಿಸಿದಿರಿ ಎಂದು ನಗೆಯಾಡಿದರು.

ರಾಜಕೀಯ ಅಧಿಕಾರ ಶಾಸ್ವತವಲ್ಲ, ರಾಜಕೀಯ ವಿರೋಧವೂ ಶಾಸ್ವತವಲ್ಲ, ಸೋಲು, ಗೆಲುವು ಯಾವುದೂ ಶಾಸ್ವತವಲ್ಲ. ಕಾಲಘಟ್ಟದಲ್ಲಿ ಅಂದು ನನನ್ನು ವಿರೋಧಿಸಿದವರೇ ಇಂದು ನನ್ನ ಅಭಿವೃದ್ಧಿ ಕೆಲಸ ನೋಡಿ ನನ್ನೊಂದಿಗೆ ಬಂದಿದ್ದಾರೆ. ಕಾಲಘಟ್ಟದಲ್ಲಿ ನಾವು ಮಾಡುವ ಕೆಲಸಗಳು ಮಾತ್ರ ಶಾಸ್ವತವಾಗಿ ಉಳಿಯುತ್ತವೆ.

ರಾಜಕೀಯ ರಹಿತವಾಗಿ ನಾವು ಮಾಡುವ ಒಳ್ಳೆ ಕೆಲಸಗಳನ್ನು ಮುಂದಿನ ಪೀಳಿಗೆ ನೆನಪಿಸುವಂತಾಗಬೇಕು ಎಂದರು.

ಏತ ನೀರಾವರಿಯ ಬಳೂತಿ ಜಾಕವೆಲ್ ಕೂಡ ಅರ್ಧಕ್ಕೆ ನಿಂತಿತ್ತು. ಮುಳುಗಡೆ ಸಂತ್ರಸ್ತರವೀ ನೆಲದಲ್ಲಿ ತುರ್ತು ಅಭಿವೃದ್ಧಿ ಅಗತ್ಯವನ್ನು ಮನಗಂಡು ಜನ ಕೊಟ್ಟ ಪ್ರೀತಿ, ಆಶೀರ್ವಾದದಂತೆ ಅಭಿವೃದ್ಧಿ ಮಾಡಿದ್ದೇನೆ. ಹೀಗೆ ಇಡೀ ಬಸವನಬಾಗೇವಾಡಿ ವಿಧಾನಸಭೆ ಕ್ಷೇತ್ರದಲ್ಲಿ ಏನೆಲ್ಲ ಅಭಿವೃದ್ಧಿ ಮಾಡಿದರೂ ನಾನು ಪ್ರಚಾರ ಪಡೆಯಲಿಲ್ಲ. ಉದ್ಘಾಟನಾ ಸಮಾರಂಭ ಮಾಡಿ ಇದು ನಾನು ಮಾಡಿದ್ದು ಎಂದು ಹೇಳಲಿಲ್ಲ. ನಾನು ಅಭಿವೃದ್ಧಿ ಪರ ಎಂಬ ಕಾರಣಕ್ಕೆ ನೀವು ನನ್ನನ್ನು 4 ಬಾರಿ ಗೆಲ್ಲಿಸಿದ್ದೀರಿ ಎಂದರು.

ಆಲಮಟ್ಟಿಯ ಲಾಲ್ ಬಹಾದ್ದೂರ್ ಶಾಸ್ತ್ರಿ ಸಾಗರದ ಕೃಷ್ಣಾ ನದಿ ಹಿನ್ನೀರಿನಲ್ಲಿ ಮುಳುಗಿದ್ದ ಕೊಲ್ಹಾರ ಪುನರ್ವಸತಿ ಕಂಡು ಇದೀಗ 25 ವಸಂತಗಳು ಸಂದಿವೆ. ನಿಮ್ಮ ಸೇವೆ, ತ್ಯಾಗ,ಅಭಿಮಾನ,ಪ್ರೀತಿಗೆಕೃತಜ್ಞತೆಸಲ್ಲಿಸಲು ಬೆಳ್ಳಿ ಹಬ್ಬದ ಸಂಭ್ರಮ ಹಮ್ಮಿಕೊಂಡಿದ್ದೇವೆ. ಸದರಿ ಕಾರ್ಯಕ್ರಮಕ್ಕೆ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರಅವರು,ಆಗಮಿಸಲಿದ್ದು, ಕ್ಷೇತ್ರದ ಜನರು ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸೇರಬೇಕು ಎಂದು ಮನವಿ ಮಾಡಿದರು.

ಕೊಲ್ಹಾರ, ಸಿದ್ದನಾಥ, ಬಳೂತಿ, ಮಸೂತಿ, ಮಲಘಾಣ, ಕುಪಕಡ್ಡಿ, ರೋಣಿಹಾಳ, ಹಳೆರೊಳ್ಳಿ, ತಳೇವಾಡ, ಕೂಡಗಿ, ಕಲಗುರ್ಕಿ ಸೇರಿದಂತೆ ಇತರೆ ಗ್ರಾಮಗಳ ಜನರು ಪಾಲ್ಗೊಂಡಿದ್ದರು.

ಕೊಲ್ಹಾರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಫೀಕ ಪಕಾಲಿ, ಜಿ.ಪಂ. ಮಾಜಿ ಸದಸ್ಯ ಕಲ್ಲಪ್ಪ ದೇಸಾಯಿ, ಉಸ್ಮಾನ ಪಟೇಲ, ಪಟ್ಟಣ ಪಂಚಾಯತಅಧ್ಯಕ್ಷಸಿ.ಎಸ್.ಗಿಡ್ಡಪ್ಪಗೋಳ, ಶ್ರೀ ಶಿವಾನಂದ ಪಾಟೀಲ ಅಭಿಮಾನಿ ಬಳಗದಅಧ್ಯಕ್ಷತಾನಾಜಿನಾಗರಾಳ,ಮಲ್ಲಪ್ಪ ಬೀಳಗಿ, ಎಸ್.ಬಿ.ಪತಂಗಿ, ಶಿವಲಿಂಗಪ್ಪ ತಳೇವಾಡ, ಎಸ್.ಎಸ್.ಗರಸಂಗಿ, ಕುಮಾರಗೌಡ ಪಾಟೀಲ, ಸದಾನಂದ ನಿಂಗನೂರ ಸೇರಿದಂತೆ ಇತರರು ವೇದಿಕೆ ಮೇಲೆ ಉಪಸ್ಥಿತರಿದ್ದರು.

ಕೊಲ್ಹಾರ ಪಟ್ಟಣದಲ್ಲಿ ಜರುಗಿದ ವಿವಿಧ ಅಭಿವೃದ್ಧಿ ಯೋಜನೆಗಳ ಲೋಕಾರ್ಪಣೆಗೆ ಆಗಮಿಸುತ್ತಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಕಾರ್ಯಕ್ರಮದ ಪೂರ್ವ ಸಿದ್ಧತಾ ಸಭೆಯಲ್ಲಿ ಸಚಿವ ಶಿವಾನಂದ ಪಾಟೀಲ ಮಾತನಾಡಿದರು.

# ಮಾತೃ ಸಮಾವೇಶ ಕೊಲ್ಹಾರದಲ್ಲಿ



**ಕೊಲ್ಹಾರ:**"ಭಾರತದ ಕೃಷಿಯಲ್ಲಿ ಮೊದಲಿನಿಂದಲೂ ಮಹಿಳೆ ಕೃಷಿಯಲ್ಲಿ ಪ್ರಧಾನ ಪಾತ್ರ ವಹಿಸುತ್ತಾಳೆ ಆದ್ದರಿಂದ ಮಹಿಳೆ ಕೃಷಿ ಪ್ರಧಾನಳು" ಎಂದು ಪ್ರಗತಿಪರ ರೈತ ಮಹಿಳೆ ಕವಿತಾ ಮಿಶ್ರಾ ತಿಳಿಸಿದರು.

ಪಟ್ಟಣದಶ್ರೀಪಟ್ಟದೇವರುಹಿರೇಮಠಸಹಯೋಗದಲ್ಲಿ ಬುಧವಾರ ಮಾತೃ ಸಮಾವೇಶದಲ್ಲಿ ಪ್ರಗತಿಪರ ರೈತ ಮಹಿಳೆ ಕವಿತಾ ಮಿಶ್ರಾ ಉಪನ್ಯಾಸದಲ್ಲಿ ಮಹಿಳೆ ಕೃಷಿ ಪ್ರಧಾನಳು,


ಕೃಷಿಅಭಿವೃದ್ಧಿಗೆಮಹಿಳೆಬೆಳಿಗ್ಗೆಯಿಂದರಾತ್ರಿವರೆಗೂ ಕೃಷಿ ಮತ್ತು ಕೃಷಿ ಸಂಬಂಧಿತ ಕೆಲಸ ಮಾಡಿ ತನ್ನ ಕುಟುಂಬ ಮತ್ತು ವ್ಯವಸಾಯದಲ್ಲಿ ತನ್ನನ್ನು ತಾನು ತೊಡಗಿಸಿಕೊಂಡು ತಾನು ಪ್ರಧಾನಳು ಎಂದು ನಾನು ತೋರಿಸಿ ಕೊಟ್ಟಿರುವೆ, ಕಾಯಕದ ಜೊತೆ ನಮ್ಮ ದೇಶದ ಸಂಸ್ಕೃತಿಯನ್ನು ನಾವು ಸ್ತ್ರೀಯರು ಮಕ್ಕಳಿಗೆ ಕುಟುಂಬದ ಸದಸ್ಯರಲ್ಲಿ ಬೆಳೆಸಿ ಉತ್ತಮ ಕೃಷಿಕ ಸಮಾಜದ ನಿರ್ಮಾಣಕ್ಕೆ ಪ್ರಯತ್ನ ಮಾಡೋಣ, ಸುಸಂಸ್ಕೃತ ಭಾರತ ನಿರ್ಮಾಣ ನಮ್ಮ ಕೈಯಲ್ಲಿ ಇದೆ ಎಂದು ಹೇಳಿದರು.

ಮಾತೃ ಸಮಾವೇಶದಲ್ಲಿ 11001 ಸಹಸ್ರ ಸಹಸ್ರ ಮುತ್ತೈದೆಯರು ಉಡಿ ತುಂಬಿ ಕೊಂಡರು, ಸಂಗೀತ ಸಂಜೆ, ಜಾನಪದ ಜಾದೂ ರಸಮಂಜರಿ ನಡೆಯಿತು. ಮಾತೃ ಸಮಾವೇಶವನ್ನು ಭಾಗ್ಯಶ್ರೀ ಶಿವಾನಂದ ಪಾಟೀಲ ಉದ್ಘಾಟಿಸಿದರು, ಸಾನಿಧ್ಯ ಚನ್ನಬಸವ ಮಹಾಸ್ವಾಮಿಗಳು ಶ್ರೀ ವಿರಕ್ತಮಠ, ಇಂಗಳೇಶ್ವರ,ಪ್ರಭುಕುಮಾರ ಶಿವಾಚಾರ್ಯ ಮಹಾಸ್ವಾಮಿಗಳು ಶ್ರೀ ಜಗದೀಶ್ವರ ಹಿರೆಮಠ, ಮಸೂತಿ,ಪ್ರಭುಕುಮಾರ ಶಿವಾಚಾರ್ಯ ಮಹಾಸ್ವಾಮಿಗಳು ಕೊಲ್ಹಾರ, ಸಿದ್ಧರಾಮ ಮಹಾಸ್ವಾಮಿಗಳು ಮಸಬಿನಾಳ, ಅತಿಥಿಗಳಾಗಿ ಕಾವ್ಯ ಕಲ್ಲಪ್ಪ ದೇಸಾಯಿ, ಶಾಂತಾಬಾಯಿ ನಾಗರಾಳ, ಸವಿತಾ ಬೆಳ್ಳುಬ್ಬಿ ,ಡಾ.ಜೀವನ್ ಸಾಬ್ ವಾಲಿಕಾರ, ಮಹಾಂತೇಶ ಹಡಪದ ಉಪಸ್ಥಿತರಿದ್ದರು.

# ಭಯೋತ್ಪಾದನೆ ನಿರ್ಮೂಲನೆಗೆ ಸಂಕಲ್ಪ ಮಾಡಿ: ಸಂತೋಷ ಬಂಡೆ

**ವಿಜಯಪುರ :** ಭಯೋತ್ಪಾದನೆ ಎಂಬ ಜಾಗತಿಕ ಪಿಡುಗನ್ನು ಸಾಮೂಹಿಕವಾಗಿ ಎದುರಿಸಲು ನಾಗರಿಕರಲ್ಲಿ ಏಕತೆ, ಶಾಂತಿ ಮತ್ತು ದೇಶಪ್ರೇಮದ ಪ್ರಜ್ಞೆಯನ್ನು ಬೆಳೆಸುವುದು ಇಂದಿನ ಅಗತ್ಯವಾಗಿದೆ ಎಂದು ಶಿಕ್ಷಕ ಸಂತೋಷ ಬಂಡೆ ಹೇಳಿದರು.

ಬುಧವಾರ ತಾಲೂಕಿನ ನಾಗಠಾಣ ಗ್ರಾಮದ ಅರಿವು ಕೇಂದ್ರದಲ್ಲಿ ಹಮ್ಮಿಕೊಂಡ 'ರಾಷ್ಟ್ರೀಯ ಭಯೋತ್ಪಾದನೆ ವಿರೋಧಿ ದಿನ'ದ ಕಾರ್ಯಕ್ರಮದಲ್ಲಿ ಪ್ರತಿಜ್ಞಾ ವಿಧಿ ಬೋಧಿಸಿ ಅವರು ಮಾತನಾಡಿದರು.



ಇಂದಿನ ಯುವಪೀಳಿಗೆಗೆ ದೇಶದ ಸಂಸ್ಕೃತಿ, ಸಂಸ್ಕಾರ, ಶಾಂತಿಯ ಮೌಲ್ಯವನ್ನು ಕಲಿಸಬೇಕು. ನಾವು ಭಾರತವನ್ನು ಭರವಸೆ, ಶಕ್ತಿ ಮತ್ತು ಒಗ್ಗಟ್ಟಿನ ಸಂಕೇತವನ್ನಾಗಿಸಿ, ಶಾಂತಿ, ಸಹಬಾಳ್ವೆಯ ತೋಟವನ್ನಾಗಿ ಮಾಡಿ, ಭಯೋತ್ಪಾದನೆಯ ಸಂಪೂರ್ಣ ನಿರ್ಮೂಲನೆಗೆ ಸಂಕಲ್ಪ ಮಾಡಬೇಕಿದೆ ಎಂದು ಹೇಳಿದರು.

ವಿಶ್ವನಾಥ ಕಲಗೊಂಡ ಮಾತನಾಡಿ, ಭಯೋತ್ಪಾದನೆಯ ಪರಿಣಾಮಗಳ ಬಗ್ಗೆ ಜನರಿಗೆ ಶಿಕ್ಷಣ ನೀಡುವ ಅಗತ್ಯತೆ ಇದೆ. ಭಯೋತ್ಪಾದನೆಯನ್ನು ಬೇರು ಸಮೇತನಿರ್ಮೂಲನೆಮಾಡುವತ್ತ ನಾವೆಲ್ಲರೂ ಸಕ್ರಿಯವಾಗಿ ಕೆಲಸ ಮಾಡಬೇಕಾಗಿದೆ ಎಂದು ಹೇಳಿದರು.

ಗ್ರಂಥಪಾಲಕ ಮಂಜುನಾಥ ಗಂಗನಳ್ಳಿ ಮಾತನಾಡಿ, ರಾಷ್ಟ್ರದ ಶಾಂತಿ, ಅಭಿವೃದ್ಧಿಗೆ ಭ'ಂಯೋತ್ಪಾದ'ನ'ಂ'ುಂಂ ತೊಡಕಾಗಿದ್ದು, ಅದರ ನಿರ್ಮೂಲನೆಗೆ ಎಲ್ಲರೂ ಜೊತೆಗೂಡಿ ಬೇರು ಸಹಿತ ಸರ್ವನಾಶ ಮಾಡುವ ದೃಢ ಸಂಕಲ್ಪದೊಂದಿಗೆ ಮುನ್ನುಗ್ಗಬೇಕಾಗಿದೆ ಎಂದು ಹೇಳಿದರು.

ಗ್ರಾಮದ ವಿಶ್ವನಾಥ ಹಂಡಿ, ಬಸವರಾಜ ಸಾರವಾಡ, ಸುರೇಶ ಕತ್ನಳ್ಳಿ, ಪ್ರವೀಣ ಅರಕೇರಿ, ಶಂಕರ ಲೋಣಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಯತ್ನಾಳಗೆ ಗೌಡಕಿ ಎಂಬುವುದು ಗೊತ್ತೇ ಇಲ್ಲ: ವಿಜುಗೌಡ

**ವಿಜಯಪುರ :** ಬಿಜೆಪಿ ಮುಖಂಡ ವಿಜುಗೌಡ ಪಾಟೀಲ ಅವರು ವಿಜಯಪುರ ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

ಮಂಗಳವಾರ ನಗರದಲ್ಲಿ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಅವರು, ಯತ್ನಾಳ ಅವರು ನಮ್ಮ ತಂದೆಯ ಬಗ್ಗೆ ಮಾತನಾಡುತ್ತಾರೆ. ನಾವೂ ನಮ್ಮಪ್ಪನಿಗೆ ಹುಟ್ಟಿದ್ದೇವೆ. ನಾನು ಯತ್ನಾಳ ಅವರ ಅಪ್ಪನ ಬಗ್ಗೆ ಮಾತನಾಡುವುದಿಲ್ಲ. ಹಿರಿಯರ ಬಗ್ಗೆ ಗೌರವ ಕೊಡಬೇಕು ಎಂದರು.



ರಾಜ್ಯದಲ್ಲಿಯೇ ನಮ್ಮ ಮನೆತನದ ಇತಿಹಾಸ ಇದೆ. ಈತ ಯಾವ ಸೀಮೆ ಗೌಡ. ಗೌಡಕಿ ಎಂದರೆ ಏನು ಎಂಬುವುದು ಯತ್ನಾಳಗೆ ಗೊತ್ತೇ ಇಲ್ಲ ಎಂದು ಹೇಳಿದರು.

ನಾವು ಯಾರೊಂದಿಗೂ ಹೊಂದಾಣಿಕೆ ರಾಜಕಾರಣ ಮಾಡಿಲ್ಲ. ಉಸ್ತುವಾರಿ ಮಂತ್ರಿಗಳ ಜೊತೆಗೆ ಇಂದು ಯತ್ನಾಳ ಅವರೇ ಹೊಂದಾಣಿಕೆ ರಾಜಕಾರಣ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ಯತ್ನಾಳಗೆ ರಾಜಕೀಯ ಜೀವನ ನೀಡಿದ್ದೆ ನಮ್ಮ ಕುಟುಂಬ ಎಂದು ವಿಜುಗೌಡ ಹೇಳಿದರು.

# ನೇಕಾರರ ಬಾಕಿ ವಿದ್ಯುತ್ ಬಿಲ್ಲನ್ನು ಸರ್ಕಾರವೇ ಭರಿಸಬೇಕು

# ಸರ್ಕಾರ ನೇಕಾರರನ್ನು ನಿರ್ಲಕ್ಷ್ಯ ಮಾಡುತ್ತಿದೆ

**ರಬಕವಿ–ಬನಹಟ್ಟಿ :** ರಾಜ್ಯ ಸರ್ಕಾರ ನೇಕಾರರನ್ನು ನಿರ್ಲಕ್ಷ್ಯ ಮಾಡುತ್ತಿದೆ. ನೇಕಾರರು ತಮ್ಮ ತೊಂದರೆಗಳ ನಿವಾರಣೆಗಾಗಿ ಹಲವಾರು ಸಭೆ ಪಾದ ಯಾತ್ರೆಗಳನ್ನು ನಡೆಸಿ, ಬೆಳಗಾವಿ ಮತ್ತು ಬೆಂಗಳೂರಿನಲ್ಲಿ ಸರ್ಕಾರದ ಜೊತೆಗೆ ಸಭೆಗಳನ್ನು ಮಾಡಿದ್ದರೂ ಕೂಡಾ ಯಾವುದೇ ಪ್ರಯೋಜನವಾಗಿಲ್ಲ. ಸಕ್ಕರೆ ಸಚಿವರಾಗಿರುವ ಶಿವಾನಂದ ಪಾಟೀಲರು ಮಂಡ್ಯದ ಮೈಶುಗರದ ರೂ. 52 ಕೋಟಿಯಷ್ಟು ವಿದ್ಯುತ್ ಬಿಲ್ಲನ್ನು ಮನ್ನಾ ಮಾಡಿದರು.

ಆದರೆ ರಾಜ್ಯದ ಬಡ ನೇಕಾರರ ಅಂದಾಜು 15 ರಿಂದ 20 ಕೋಟಿಯ ವಿದ್ಯುತ್ ಬಿಲ್ಲನ್ನು ಮನ್ನಾ ಮಾಡುತ್ತಿಲ್ಲ. ಒಂದು ಕಣ್ಣಿಗೆ ಸುಣ್ಣ ಮತ್ತು ಮತ್ತೊಂದು ಕಣ್ಣಿಗೆ ಬೆಣ್ಣೆಯನ್ನು ನೀಡುವ ಕೆಲಸವನ್ನು ಸರ್ಕಾರ ಮಾಡುತ್ತಿದೆ ಎಂದು ರಾಷ್ಟ್ರೀಯ ನೇಕಾರ ಸೇವಾ ಸಂಘದ ಬನಹಟ್ಟಿ ಘಟಕದ ಮುಖಂಡ ಆನಂದ ಜಗದಾಳ ತಿಳಿಸಿದರು.



ಅವರು ಬುಧವಾರ ಇಲ್ಲಿನ ಬನಹಟ್ಟಿಯ ಭದ್ರನವರ ಮನೆಯ ಮುಂಭಾಗದಲ್ಲಿ ಜಮಖಂಡಿ ಕುಡಚಿ ರಾಜ್ಯ ಹೆದ್ದಾರಿಯ ಮೇಲೆ ನೇಕಾರರು ಹಮ್ಮಿಕೊಂಡ ಪ್ರತಿಭಟನೆಯಲ್ಲಿ ಮಾತನಾಡಿದರು.

ಈಗಾಗಲೇ ವಿದ್ಯುತ್ ಬಿಲ್ ಪಾವತಿಸುವಂತೆ ಸ್ಥಳೀಯಹೆಸ್ಕಾಂಅಧಿಕಾರಿಗಳುನೇಕಾರರಿಗೆ ನೋಟಿಸ್ ನೀಡಿದ್ದಾರೆ. ಸರ್ಕಾರ ಮತ್ತು ನೇಕಾರರ ಮಧ್ಯದಲ್ಲಿ ಈ ಕುರಿತು ಚರ್ಚೆ ನಡೆಯಬೇಕಾಗಿದೆ. ಹೆಸ್ಕಾಂನ ಯಾವುದೆ ಲೈನಮನ್ ನೇಕಾರರ ಮನೆಗಳ ವಿದ್ಯುತ್ ಸಂಪರ್ಕಕ್ಕೆ ತೊಂದರೆ ಮಾಡಿದರೆ ಹೆಸ್ಕಾಂ ಕಾರ್ಯಾಲಯದ ಮುಂಭಾಗದಲ್ಲಿ ಪ್ರತಿಭಟನೆಯನ್ನು ಮಾಡಲಾಗುವುದು. ಮುಂದೆ ಆಗುವ ಎಲ್ಲ ಅನಾಹುತಗಳಿಗೆ ಹೆಸ್ಕಾಂ ಅಧಿಕಾರಿಗಳೆ ಕಾರಣರಾಗುತ್ತಾರೆ ಎಂದು ಆನಂದ ಜಗದಾಳ ಎಚ್ಚರಿಕೆಯನ್ನು ನೀಡಿದರು.

ಮತ್ತೊಬ್ಬ ಮುಖಂಡ ಮಹಾದೇವ ನುಚ್ಚಿ ಮಾತನಾಡಿ,ನೇಕಾರರ ಸಮ್ಮಾನ ಯೋಜನೆ ಜವಳಿ ಇಲಾಖೆಯ ಅಧಿಕಾರಿಗಳ ನಿರ್ಲಕ್ಷತನದಿಂದಾಗಿ ನೇಕಾರರಿಗೆ ದೊರೆಯುತ್ತಿಲ್ಲ.

ಆರ್ಥಿಕವಾಗಿ ತೊಂದರೆಯಲ್ಲಿರುವ ನೇಕಾರರು ಅರ್ಜಿಗಳನ್ನು ಹಿಡಿದುಕೊಂಡು ಬಾಗಲಕೋಟೆ, ಬೆಳಗಾವಿ, ಬೆಂಗಳೂರಿಗೆ ಅಲೆಯುವ ಪರಿಸ್ಥಿತಿ ನಿರ್ಮಾಣವಾಗಿದೆ. ಕೂಡಲೇ ರಬಕವಿ ಬನಹಟ್ಟಿಯಲ್ಲಿ ಜವಳಿ ಇಲಾಖೆಯ ಕಾರ್ಯಾಲಯವನ್ನು ಆರಂಭಿಸಬೇಕು.

ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ನೇಕಾರ ಮುಖಂಡರ ಮತ್ತು ಜವಳಿ ಇಲಾಖೆಯ ಸಭೆಯನ್ನು ನಡೆಸಬೇಕು. ಮಾಲೀಕರು ಪ್ರತಿ ವಾರಕ್ಕೆ ಕೇವಲ ಹತ್ತು ಸೀರೆಗಳನ್ನು ಮಾತ್ರ ನೇಯ್ಯುವಂತೆ ತಿಳಿಸಿದ್ದಾರೆ. ಇದರಿಂದಾಗಿ ನಮಗೆ ಬಹಳಷ್ಟು ತೊಂದರೆಯಾಗಿದೆ ಎಂದು ತಿಳಿಸಿದರು.

ತಹಶೀಲ್ದಾರ್ ಗಿರೀಶ ಸ್ವಾದಿ ಮನವಿಯನ್ನು ಸ್ವೀಕರಿಸಿ ಮಾತನಾಡಿ, ನೇಕಾರರು ನೀಡಿದ ಮನವಿಯನ್ನು ಮೇಲಾಧಿಕಾರಿಗಳಿಗೆ ಕಳುಹಿಸಲಾಗುವುದು. ಮುಂದಿನ ದಿನಗಳಲ್ಲಿ ರಸ್ತೆಗಿಳಿದು ಹೋರಾಟ ಮಾಡದೆ ಪರಸ್ಪರ ಕುಳಿತುಕೊಂಡು ಸಮಸ್ಯೆಗೆ ಪರಿಹಾರ ಕಂಡುಕೊಳ್ಳೋಣ ಎಂದು ತಿಳಿಸಿದರು.

ಬಾಗಲಕೋಟೆಯ ಜವಳಿ ಇಲಾಖೆಯ ಉಪ ನಿರ್ದೇಶಕ ಬಿ. ಎ. ಪೀರಜಾದೆ ಮಾತನಾಡಿ, ಮುಂದಿನ ದಿನಗಳಲ್ಲಿ ನೇಕಾರರ ಸಮಸ್ಯೆಗಳನ್ನು ಸರಿದೂಗಿಸುವ ಕಾರ್ಯ ಮಾಡುತ್ತೇವೆ. ಇಲಾಖೆ ನೇಕಾರರ ಪರವಾಗಿದೆ ಎಂದರು.

ಬೆಳಗಾವಿ ವಿಭಾಗದ ಜವಳಿ ಇಲಾಖೆಯ ಜಂಟಿ ನಿರ್ದೇಶಕ ಡಾ. ಶಿವರಾಜ ಕುಲಕರ್ಣಿ ಹಾಜರಿದ್ದರು.

ನೇಕಾರರು ಸ್ಥಳೀಯ ಕಾಡಸಿದ್ಧೇಶ್ವರ ದೇವಸ್ಥಾನದಿಂದ ನಗರದ ಪ್ರಮುಖ ಬೀದಿಗಳಲ್ಲಿ ಬೃಹತ್ ಪ್ರತಿಭಟನೆಯನ್ನು ನಡೆಸಿದರು.

ಪರಮಾನಂದ ಭಾವಿಕಟ್ಟಿ, ಅಡಿವೆಪ್ಪಾ ಯಾದವಾಡ, ಕೆ.ಪಿ ಬುದ್ನಿ, ಶಿವಾನಂದ ಗೊಡ್ಡಾಳೆ, ಲಕ್ಕಪ್ಪ ಗಸ್ತಿ, ಶ್ರೀಧರ ಧಬಾಡಿ, ಶಿವಾನಂದ ತೆಗ್ಗಿ ಸೇರಿದಂತೆ ರಬಕವಿ, ತೇರದಾಳ ಹಾಗೂ ಸುತ್ತಮುತ್ತಲಿನ ಗ್ರಾಮೀಣ ಭಾಗದ ನೇಕಾರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

# ವಿದ್ಯಾರ್ಥಿಗಳ ಸಾಧನೆ ಶ್ಲಾಘನೀಯ



**ಬನಹಟ್ಟಿ :** ಇಲ್ಲಿಯ ಗೆಳೆಯರ ಬಳಗದಿಂದ ಪ್ರತಿಭಾವಂತ ವಿದ್ಯಾರ್ಥಿಗಳ ಹಾಗು ರ್ಯಾಂಕ್ ವಿಜೇತರನ್ನು ಇತ್ತೀಚೆಗೆ ಸನ್ಮಾನಿಸಲಾಯಿತು.

ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ರಾಜ್ಯಕ್ಕೆ ಮೂರನೇ ಸ್ಥಾನ ಪಡೆದಿರುವ ಲಕ್ಷ್ಮಿ ಹೆರಕಲ್ ಸೇರಿದಂತೆ ಶಾರದಾ ಗಣೇಶನವರ, ಬಸವರಾಜ ಬಂಗಿ, ಕಾರ್ತಿಕ ಬಾಬಾನಗರ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಲಾಯಿತು. ಎಲ್ಲ ಸಾಧಕರು ಇದೇ ಗೆಳೆಯರ ಬಳಗದ ಮಕ್ಕಳಾಗಿದ್ದು ಮತ್ತೊಂದು ವಿಶೇಷ. ಹಿರಿಯ ಸಾಹಿತಿ ಮಲ್ಲಿಕಾರ್ಜುನ ಹುಲಗಬಾಳಿ ಮಾತನಾಡಿ, ಪಾಲಕರ ಪ್ರೋತ್ಸಾಹ ಮತ್ತು ವಿದ್ಯಾರ್ಥಿಗಳ ಶ್ರಮದಿಂದ ಈ ಸಾಧನೆ ಸಾಧ್ಯವಾಗಿದೆ. ವಿದ್ಯಾರ್ಥಿಗಳು ಅಧ್ಯಯನದೊಂದಿಗೆ ಕ್ರೀಡೆ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಆಸಕ್ತಿ ತೋರಿಸಿರುವದು ಮೆಚ್ಚುಗೆಯ ವಿಷಯವಾಗಿದೆ ಎಂದರು. ಎಸ್.ಎಸ್.ಎಲ್.ಸಿ. ಹಾಗು ಪಿ.ಯು. ಪರೀಕ್ಷೆಯಲ್ಲಿ ಬನಹಟ್ಟಿಯ

ಹಿರಿಮೆ ರಾಜ್ಯವ್ಯಾಪಿ ಸಾಧನೆಗೆ ಪ್ರತಿ ವರ್ಷ ನಡೆಯುತ್ತಿರುವದು ಗಮನಾರ್ಹವೆಂದರು. ವೇದಿಕೆ ಮೇಲೆ ಪ್ರವೀಣ ತುಕ್ಕನ್ನವರ, ಮಲ್ಲಿಕಾರ್ಜುನ ತುಂಗಳ, ಈರಣ್ಣ ಬಾಣಕಾರ, ಆನಂದ ಕುಲಗೋಡ, ಆನಂದ ಕುಳ್ಳಿ, ಆನಂದ ಬಂಗಿ ಮುಂತಾದವರು ಹಾಜರಿದ್ದರು.

ಬಾಳು ಗಣೇಶನವರ, ರವೀಂದ್ರ ಚನಪನ್ನವರ, , ವಿಜಯ ಬಾಬಾನಗರ, ಪ್ರಸಾದ ಹುಲಗಬಾಳಿ, ಮಂಡಿ, ಸಂಜು ಜವಳಗಿ, ದಾನಪ್ಪ ಉಮದಿ ಸೇರಿದಂತೆ ಇನ್ನೂ ಅನೇಕರು ಪಾಲ್ಗೊಂಡಿದ್ದರು.

## ಶ್ರೀನಿವಾಸ ಶಾಲೆಗೆ ಶೇ ನೂರಕ್ಕೆ ನೂರು ಫಲಿತಾಂಶ

**ಮೂಡಲಗಿ :** ಇಲ್ಲಿನ ಶ್ರೀನಿವಾಸ ಶಾಲೆಯ ಸಿಬಿಎಸ್ಇ ವಿಭಾಗವು ಪ್ರಸಕ್ತ ಸಾಲಿನ ಎಐಎಸ್ಎಸ್ಇ ಪರೀಕ್ಷೆಯಲ್ಲಿ ನೂರಕ್ಕೆ ನೂರು ಫಲಿತಾಂಶವನ್ನು ಪಡೆದುಕೊಂಡಿದೆ. ಫಾತಿಮಾ ಅತ್ತಾರ (ಶೇ 90) ಪ್ರಥಮ, ಪದ್ಮಾಜಾ ದೇಶಪಾಂಡೆ (ಶೇ 89) ದ್ವಿತೀಯ, ಸಹನಾ ಗುಗ್ಗರಿ (ಶೇ 88) ತೃತೀಯ, ನಮ್ರತಾ ಕಮತಿ, ಅನಘಾ ಡಿ. ಸ್ವಾಮಿ (ಶೇ 86) ನಾಲ್ಕನೆ ಸ್ಥಾನ ಪಡೆದಿದ್ದಾರೆ.

# ಕಲಾವಿದ ನೂರುದ್ದೀನ್ ಅವರಿಗೆ ಸನ್ಮಾನ

**ಬೈಲಹೊಂಗಲ :** ನಗರದ ಟಿಪ್ಪು ಬಡಾವಣೆಯ ನಿವಾಸಿ ತಬಲಾ, ಢೋಲಕ, ಹಾರ್ಮೋನಿಯಂ, ಕಾರ್ನೆಟ್, ಸಾಕ್ಸ್ ಒನ್, ನಾಟಕ, ಕವಾಲಿ, ಜಾನಪದ, ರಸಮಂಜರಿ, ಆರ್ಕೆಸ್ಟ್ರಾ, ಆಕಾಶವಾಣಿ ಮತ್ತು ಹಲವಾರು ಚಲನಚಿತ್ರಗಳಲ್ಲಿ ತಬಲಾವಾದಕರಾಗಿ ಐದು ದಶಕಗಳಿಂದ ಸೇವೆ ಸಲ್ಲಿಸುತ್ತಿರುವ ಖ್ಯಾತ ಕಲಾವಿದ ನೂರುದ್ದೀನ್ ಇಮಾಮಹುಸೇನ್ ಗೋರೆಖಾನ್ ಅವರನ್ನು ಭಾರತ ಸ್ವಾತಂತ್ರ್ಯದ ಬೆಳ್ಳಿಚುಕ್ಕಿ, ಕನ್ನಡತಿ, ವೀರರಾಣಿ ಕಿತ್ತೂರು ಚೆನ್ನಮ್ಮಾಜಿ ಅವರ ಬೈಲಹೊಂಗಲದಲ್ಲಿರುವ ಐಕ್ಯ ಸ್ಥಳದಲ್ಲಿ ಭಾರತದ ಮಾಜಿ ರಾಷ್ಟ್ರಪತಿಗಳ ಪುತ್ರರು, ಬೆಂಗಳೂರಿನ ಕೇಂದ್ರ ಬಸವ ಸಮಿತಿಯ ಅಧ್ಯಕ್ಷರಾದ ಡಾ. ಅರವಿಂದ ಬಸಪ್ಪ ಜತ್ತಿ ಅವರು ಬಸವ ಸಮಿತಿಯ ವತಿಯಿಂದ ಸನ್ಮಾನ ಪತ್ರ ಅರ್ಪಿಸಿ, ಫಲ ಪುಷ್ಪ ನೀಡಿ ಸನ್ಮಾನಿಸಿ ಗೌರವಿಸಿದರು. ಕಲಾವಿದ ನೂರುದ್ದೀನ್ ಅವರನ್ನು ಸನ್ಮಾನಿಸಿ ಮಾತನಾಡಿದ ಡಾ. ಅರವಿಂದ ಜತ್ತಿ ಅವರು ಅರ್ಧ ಶತಮಾನಗಳಿಂದ ಕಲಾವಿದನಾಗಿ ನೂರುದ್ದೀನ್ ಅವರು ರಾಜ್ಯದ ವಿವಿಧ ಭಾಗಗಳಲ್ಲಿ ತಮ್ಮ ಅನುಪಮ ಸೇವೆಯನ್ನು ಸಲ್ಲಿಸಿದ್ದಾರೆಂದರು. ಸರ್ಕಾರ ಮತ್ತು ಸಂಘ ಸಂಸ್ಥೆಗಳು ಎಲೆ ಮರೆಯ ಕಾಯಿಯಂತಿರುವ ಇಂಥ ಕಲಾವಿದರನ್ನು ಗುರುತಿಸಿ ಗೌರವಿಸಬೇಕೆಂದರು.

ಕನ್ನಡ ಸಾಹಿತ್ಯ ಪರಿಷತ್ತಿನ ಬೆಳಗಾವಿ ಜಿಲ್ಲಾ ಮಾಜಿ ಅಧ್ಯಕ್ಷರಾದ ಮೋಹನ ಬಸನಗೌಡ ಪಾಟೀಲ, ಬೆಂಗಳೂರು ಬಸವ ಸಮಿತಿಯ ಕೇಂದ್ರ ಸಮಿತಿಯ ಸದಸ್ಯರಾದ ಮಹಾದೇವಪ್ಪ ಗುರುಲಿಂಗಪ್ಪ ವಾಲಿ, ಖ್ಯಾತ ಉದ್ದಿಮೆದಾರರಾದ ಮಿಥುನ ವಿಠ್ಠಲ ಹುಗ್ಗಿ, ಸಮಾಜ ಸೇವಕ,


ಬಡವರ ಬಂಧು ರಫೀಕ್ ಬಡೇಘರ, ಖ್ಯಾತ ಸಾಹಿತಿ ಟಿ. ಎಚ್. ಎಂ. ಶೇಖರಯ್ಯ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.



## ವಿಕಲಚೇತನರು ಸರ್ಕಾರಿ ಸೌಲಭ್ಯ ಪಡೆದು ಅಭಿವೃದ್ಧಿಯಾಗಬೇಕು: ಗೋವಿಂದಪ್ಪ

**ಬಳ್ಳಾರಿ:** ವಿಶೇಷಚೇತನರುಸರ್ಕಾರದ ಸೌಲಭ್ಯಗಳನ್ನು ಪಡೆದು ಸ್ವಾವಲಂಬಿ ಜೀವನ ನಡೆಸಬೇಕು ಎಂದು ಜಿಲ್ಲಾ ಅಂಗವಿಕಲರ ಕಲ್ಯಾಣಧಿಕಾರಿ ಗೋವಿಂದಪ್ಪ ಅವರು ಹೇಳಿದರು.

ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ವತಿಯಿಂದ ಜಿಲ್ಲಾಧಿಕಾರಿಗಳ ಕಚೇರಿ ಅವರಣದಲ್ಲಿ ಶುಕ್ರವಾರ ಆಯೋಜಿಸಿದ್ದ "ಭಾರತ ಸುಗಮ್ಯ ಯಾತ್ರಾ" ಅರಿವು ಮೂಡಿಸುವ ಜಾಥಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.



ವಿಶೇಷಚೇತನರುಸರ್ಕಾರಿಕಚೇರಿಗಳಲ್ಲಿಅವರಿಗಿರುವ ಸೌಲಭ್ಯಗಳ ಮಾಹಿತಿ ಹೊಂದಬೇಕು. ಮುಖ್ಯವಾಗಿ ಅವರಿಗೆ ಯಾವುದೇ ಅಡೆತಡೆ ಇಲ್ಲದಂತೆ ಓಡಾಡಲು ಪೂರಕ ಪರಿಸರ ಕಲ್ಪಿಸಿಕೊಟ್ಟು ಮುಖ್ಯವಾಹಿನಿಗೆ ಬರುವಂತೆ ನೋಡಿಕೊಳ್ಳಬೇಕು ಎಂದರು.

"ಭಾರತ ಸುಗಮ್ಯ ಯಾತ್ರಾ" ಅರಿವು ಮೂಡಿಸುವ ಜಾಥಾಗೆ ಜಿಲ್ಲಾಧಿಕಾರಿಗಳ ಕಚೇರಿಯ ತಹಶೀಲ್ದಾರರಾದ ಗೌಸಿಯಾ ಬೇಗಂ ಅವರು ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ಅಂಗವಿಕಲರ ಕಲ್ಯಾಣ ಇಲಾಖೆಯ ಸಿಬಂದ್ದಿಗಳು ಸೇರಿದಂತೆ ವಿಶೇಷಚೇತನರು, ಹಿರಿಯ ನಾಗರೀಕರು ಮತ್ತು ಇತರರು ಭಾಗವಹಿಸಿದ್ದರು.

ವರದಿ ಇಜಿ ರೆಡ್ಡಿ

"SIHI KAHI" Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State

Designed by MKG-9535762618